# ಅಧ್ಯಾಯ 2 ಐತಿಹಾಸಿಕ ಹಿನ್ನೆಲೆ



ಶ್ರವಣ ಬೆಳಗೊಳದ ರಮ್ಯನೋಟ



# ಅಧ್ಯಾಯ ೨



Old paintings tell a story

## ಐತಿಹಾಸಿಕ ಹಿನ್ನೆಲೆ

ಅಸಂಖ್ಯಾತ ಇತಿಹಾಸ–ಪೂರ್ವ ಕಾಲದ ಪಳೆಯುಳಿಕೆಗಳು, ಶಾಸನಗಳು, ಸ್ಮಾರಕ ಶಿಲ್ಪಗಳು, ಸ್ಥಳೀಯ ಹಾಗೂ ವಿದೇಶೀ ಸಾಹಿತ್ಯಕ ದಾಖಲೆಗಳು ಕರ್ನಾಟಕದ ಸಿರಿವಂತ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಸಾರುತ್ತವೆ.

### ಇತಿಹಾಸ–ಪೂರ್ವ ಕಾಲ ಹಾಗೂ ನಾಗರಿಕತೆಗಳ ಪ್ರಾರಂಭ

ಅತ್ಯಂತ ಪುರಾತನ ಕಾಲದಿಂದ ಇತ್ತೀಚಿನ ದಿನಗಳವರೆಗಿನ ನಿರಂತರ ಮಾನವ ಚಟುವಟಿಕೆಯ ಅವಿರತ ಅಸ್ತಿತ್ವವಿರುವ ಜಗತ್ತಿನ ಕೆಲವೇ ಪ್ರದೇಶಗಳಲ್ಲಿ ಕರ್ನಾಟಕವೂ ಒಂದು.ಪೃಥ್ವಿಯ ಮೇಲಿನ ಮಾನವನ ಎಡೆಬಿಡದ ಸಾಂಸ್ಕೃತಿಕ ಅಭಿವೃದ್ಧಿಯ ಹಂತಗಳ ಎಲ್ಲ ಘಟ್ಟಗಳೂ ರಾಜ್ಯದಲ್ಲಿ ಪ್ರತಿನಿಧಿಸಲ್ಪಟ್ಟಿವೆ; ಅವುಗಳೆಂದರೆ ಪ್ರಾಚೀನ ಶಿಲಾಯುಗ (ಪೇಲಿಯೋಲಿಥಿಕ್), ಮಧ್ಯಶಿಲಾಯುಗ (ಮೆಸೋಲಿಥಿಕ್), ನವಶಿಲಾಯುಗ (ನಿಯೋಲಿಥಿಕ್), ತಾಮ್ರಶಿಲಾಯುಗ (ಚಾಲ್ಕೋಲಿಥಿಕ್), ಬೃಹತ್‌ಶಿಲಾ [ಮೆಗಾಲಿಥಿಕ್ (ಕಬ್ಬಿಣ)] ಯುಗ ಹಾಗೂ ಪ್ರಾಗಿತಿಹಾಸ ಕಾಲ. ಆದರೆ, ಇಲ್ಲಿಯವರೆವಿಗೂ, ಪೇಲಿಯೋಲಿಥಿಕ್ ಹಾಗೂ ಮೆಸೋಲಿಥಿಕ್ ಹಂತಗಳಿಗೆ ಸೇರಿದ ಯಾವುದೇ ಮಾನವ ಪಳೆಯುಳಿಕೆಗಳು ದೊರೆತಿಲ್ಲ.

**ಪ್ರಾಚೀನ ಶಿಲಾ ಅಥವಾ ಪೇಲಿಯೋಲಿಥಿಕ್ ಯುಗ:** ಶೊಸುರಾಪುರ ಪ್ರದೇಶದ (ಗುಲ್ಬರ್ಗಾ ಜಿಲ್ಲೆ) ಹುಣಸಗಿ ಕಣಿವೆಯ ಹುಣಸಗಿ, ಬೈಚ್‌ಬಾಳ್, ಇಸಾಮ್‌ಪುರ್, ಮುಂತಾದ ಸ್ಥಳಗಳಲ್ಲಿ ನಡೆದ ಉತ್ಖನನಗಳು, ಪ್ರಾಚೀನ ಶಿಲಾಯುಗ ಅವಧಿಯ ವಾಸಸ್ಥಾನ ಹಾಗೂ ಚಟುವಟಿಕೆಯ ತಾಣಗಳಿಗೆ ಸಾಕ್ಷಿಯನ್ನು ತೆರೆದಿಟ್ಟಿವೆ. ಇದು ಲೋಯರ್ ಪೇಲಿಯೋಲಿಥಿಕ್, ಆದಿ ಶಿಲಾಯುಗ



ಇತಿಹಾಸ ಪೂರ್ವಕಾಲದ ರೇಖಾಚಿತ್ರಗಳು

ಅಥವಾ ಅಚ್ಯುಲಿಯನ್ ಸಂಸ್ಕೃತಿಯೆಂದು ಕರೆಯಲಾಗುವ ಪೇಲಿಯೋಲಿಥಿಕ್ ಯುಗದ ಪ್ರಾರಂಭಿಕ ಹಂತವನ್ನು ಪ್ರತಿನಿಧಿಸುತ್ತದೆ. ಕಲ್ಲು ಹಾಗೂ ಸುತ್ತಿಗೆಯ ಆದಿ ವಿಧಾನವನ್ನು ಬಳಸಿ ಮಾಡಿದ ಕೈಗೊಡಲಿ, ಕಡಿಕತ್ತಿ ಹಾಗೂ ಮಚ್ಚುಗಳಂತಹ ಚಕ್ಕೆ ಕಲ್ಲಿನ ಸಲಕರಣೆಗಳ ಬಳಕೆಯು ಈ ಹಂತದ ಹೆಗ್ಗುರುತು.ಈ ಸಲಕರಣೆಗಳನ್ನು ಪ್ರಾಣಿ ಬೇಟೆ, ಮಾಂಸ ಕೊಯ್ಯಲು, ತಿನ್ನಬಹುದಾದ ತೋಡು ಬೇರುಗಳು ಹಾಗೂ ಹಗುರವಾದ ಈಟಿಗಳಂತಹ ಮರದ ಆಯುಧಗಳನ್ನು ತಯಾರಿಸಲು ಬಳಸಲಾಗುತ್ತಿತ್ತು. ಈ ಯುಗದ ಉತ್ಖನನಗಳು, ಕಲ್ಲು ಸಲಕರಣೆಗಳನ್ನು ತಯಾರಿಸುವ ಕಾರ್ಯ ಕ್ಷೇತ್ರವಾಗಿದೆ; ಸಿದ್ಧವಾದ ಕಲ್ಲಿನ ಸಲಕರಣೆಗಳು ಹಾಗೂ ಗಾಳಿ ರಕ್ಷಣೆ/ಆಶ್ರಯಗಳ ಭಾಗವಾಗಿರಬಹುದಾದ, ವೃತ್ತಾಕಾರದಲ್ಲಿ ಇರಿಸಲಾದ ಬಂಡೆಗಳ ಸರಣಿಗಳಿಂದ ಇದು ಸೂಚಿತವಾಗಿದೆ.ಮನುಷ್ಯ ಸಂಕುಲದ ಚರಿತ್ರೆಯಲ್ಲಿ ಕಟ್ಟಡ ನಿರ್ಮಾಣದ ಆರಂಭ ಕಾಲದ, ಪ್ರಾರಂಭಿಕ ಸಾಕ್ಷಿಯಂತೆ ಇವು ತೋರುತ್ತವೆ.ಈ ಪ್ರದೇಶದ ಪ್ರಾರಂಭಿಕ ಪೇಲಿಯೋಲಿಥಿಕ್ ಹಂತವನ್ನು ಸುಮಾರು ಒಂದು ದಶಲಕ್ಷ ವರ್ಷಗಳ ಹಿಂದಿನದೆಂದು ಕಾಲಗಣನೆ ಮಾಡಲಾಗಿದೆ.

ಕೃಷ್ಣಾ, ತುಂಗಭದ್ರಾ, ಭೀಮಾ, ಮಲಪ್ರಭಾ ಹಾಗೂ ಘಟಪ್ರಭಾ ನದಿ ದಡಗಳ ಅನೇಕ ತಾಣಗಳಲ್ಲಿ ಪ್ರಾರಂಭಿಕ ಪೇಲಿಯೋಲಿಥಿಕ್ ಸಲಕರಣೆಗಳು ಬಹಳಷ್ಟು ಸಂಖ್ಯೆಯಲ್ಲಿ ದೊರೆತಿವೆ. ಉತ್ತರ ಕರ್ನಾಟಕದ ನದೀ ಕಣಿವೆಗಳಲ್ಲಿ ಇರುವ ಇತರ ಪ್ರಮುಖ ತಾಣಗಳೆಂದರೆ ಹುಣಸಗಿ, ಗುಳ್ಬಾಲ್, ಕಲ್ದೇವನಹಳ್ಳಿ, ತೆಗ್ಗಿನಹಳ್ಳಿ, ನಿಟ್ಟೂರು, ಅನಗವಾಡಿ ಹಾಗೂ ಖ್ಯಾಡ್.ತುಮಕೂರು ಜಿಲ್ಲೆಯಲ್ಲಿರುವ ಕಿಬ್ಬನಹಳ್ಳಿಯೂ ಇತಿಹಾಸ–ಪೂರ್ವ ಯುಗದ ಅದೇ ರೀತಿಯ ಸಲಕರಣೆಗಳು ದೊರೆತ ಮತ್ತೊಂದು ಪ್ರದೇಶ.ಕೋಲಾರ, ಚಾಮರಾಜನಗರ, ಕೊಡಗು, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ, ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಿಂದಲೂ ಇತಿಹಾಸ ಪೂರ್ವ ಕಾಲದ ಅವಶೇಷಗಳು ದೊರೆತಿವೆ.



ಇತಿಹಾಸ ಪೂರ್ವ ಕಾಲದ ರೇಖಾ ಚಿತ್ರಗಳು



ಬೃಹತ್ ಶಿಲಾಯುಗ ಸಮಾಧಿ, ಅರಭಿಕೊತ್ತನೂರು, ಕೋಲಾರ ಜಿಲ್ಲೆ

ಪ್ರಾರಂಭಿಕ ಪೇಲಿಯೋಲಿಥಿಕ್ ಯುಗವು ಮನುಕುಲದ ಚರಿತ್ರೆಯ ಅತ್ಯಂತ ದೀರ್ಘಾವಧಿಯದ್ದಾಗಿದೆ. ಆಫ್ರಿಕಾದಲ್ಲಿ ಇದ್ದಂತೆ, ಇದೇ ಅವಧಿಯಲ್ಲಿ, ಪಿಥೆಕ್ಯಾಂಥ್ರೋಪಸ್/ಹೋಮೋ–ಎರೆಕ್ಟಸ್ ಸಂತತಿಯ ಪ್ರಾರಂಭಿಕ ಹೊಮಿನಿಡ್ ಪೂರ್ವಿಕರು ಕರ್ನಾಟಕದಲ್ಲೂ ಜೀವಿಸಿದ್ದಿರಬಹುದು. ಪ್ರಾರಂಭಿಕ ಪೇಲಿಯೋಲಿಥಿಕ್ ಸಂಸ್ಕೃತಿಯು ಕ್ರಿ.ಪೂ.೬೦,೦೦೦ದವರೆಗೂ ಮುಂದುವರಿದಂತೆ ತೋರುತ್ತದೆ.

ಶಿಲಾಯುಧ ಸಲಕರಣೆಗಳನ್ನು ತಯಾರಿಸುವ ವಿಧಾನಗಳಲ್ಲಿ, ಮಧ್ಯ ಶಿಲಾಯುಗದ ಎಂದು ಕರೆಯಲಾದ, ಮುಂದಿನ ಹಂತದಲ್ಲಿ ಗಣನೀಯ ಪ್ರಗತಿಯನ್ನು ತೋರಿಸಿದೆ. ಪ್ರಾರಂಭಿಕ ಪೇಲಿಯೋಲಿಥಿಕ್ ಸಲಕರಣೆಗಳಿಗೆ ಹೋಲಿಸಿದರೆ, ಹೆಚ್ಚಾಗಿ ಚಕ್ಕೆಗಳ ಮೇಲೆ ತಯಾರಿಸಲಾದ ಕಲ್ಲಿನ ಸಲಕರಣೆಗಳು, ಗಾತ್ರ ಹಾಗೂ ತೂಕದಲ್ಲಿ ಸಾಕಷ್ಟು ಚಿಕ್ಕದಾಗಿದ್ದು, ಹಿಡಿಯಲು ಹಾಗೂ ಹೆಚ್ಚು ಸಮರ್ಥವಾಗಿ ಬಳಸಲು ಸುಲಭವಾಯಿತು. ಚಕ್ಕೆಗಳನ್ನು ಚೂಪಾದ ಸಲಕರಣೆಗಳಾಗಿ ಮಾಡಲಾಯಿತು. ಅಲ್ಲದೆ ಹೆರೆಯುವ ಸಾಧನಗಳು, ಈ ಹಂತದ ವಿಶಿಷ್ಟ ಸ್ವರೂಪದ ಸಲಕರಣೆಗಳಾದವು. ಈ ಮೊನಚಾದ ಮೊನೆಗಳನ್ನು ಈಟಿಯ ಮೊನೆಗಳಾಗಿ ಬೇರುಗಳನ್ನು ಅಗೆದು ತೆಗೆಯಲು ಬಳಸಲಾಗುತ್ತಿತ್ತು. ಮರ, ಚರ್ಮ, ಇತ್ಯಾದಿಗಳ ಮೇಲೆ ಬಳಸಲು, ಅನೇಕ ರೀತಿಯ ಹೆರೆಯುವ ಸಾಧನಗಳನ್ನು ಬಳಸಲಾಯಿತು.ಉತ್ತರ ಕರ್ನಾಟಕದ ಮರಳಭಾವಿ, ಸಾಲವಡಗಿ,

ಸಾವಳಗಿ, ಮೆಣಸಿಗಿ, ವಜ್ಜಳ, ಇತ್ಯಾದಿ ಸ್ಥಳಗಳು ಹಾಗೂ ದಕ್ಷಿಣ ಕರ್ನಾಟಕದ ಕಿಬ್ಬನಹಳ್ಳಿ ಹಾಗೂ ಹೆಮ್ಮಿಗೆಯಲ್ಲಿ ಈ ರೀತಿಯ ಸಲಕರಣೆಗಳು ನೂರಾರು ಸಂಖ್ಯೆಯಲ್ಲಿ ದೊರೆತಿವೆ.

ವಿಶ್ವದ ಬೇರೆಡೆ, ಅದರಲ್ಲೂ ಯೂರೋಪ್ ಹಾಗೂ ಉತ್ತರ–ಪೂರ್ವ ಏಶಿಯಾಗಳಲ್ಲಿ, ಈ ರೀತಿಯ ಸಂಸ್ಕೃತಿಗೆ ಕಾರಣಭೂತನು, ನಿಯಾಂಡ್ರಥಲ್ ಮಾನವನಾಗಿದ್ದು, ಕರ್ನಾಟಕದಲ್ಲೂ ಇದೇ ರೀತಿ ಇತ್ತು ಎಂದು ಊಹಿಸಬಹುದಾದರೂ ಯಾವುದೇ ನಿರ್ದಿಷ್ಟ ಸಾಕ್ಷಿಗಳಿಲ್ಲ.ಜಗತ್ತಿನ ಇತರ ಪ್ರದೇಶಗಳಲ್ಲಿರುವಂತೆ, ಕರ್ನಾಟಕದಲ್ಲೂ, ಈ ಮಧ್ಯ ಪೇಲಿಯೋಲಿಥಿಕ್ ಯುಗವು ೬೦,೦೦೦–೩೦,೦೦೦ ಕ್ರಿ.ಪೂ.ಗಳ ನಡುವೆ ಇದ್ದಿರಬಹುದು.

ಮುಂದಿನ ಹಂತವಾದ ಅಂತ್ಯ ಶಿಲಾಯುಗವು ಉತ್ತರ ಕರ್ನಾಟಕದ ಕೋವಳ್ಳಿ, ಇಂಗಳೇಶ್ವರ, ಯಾದವಾಡ್ ಹಾಗೂ ಮರಳ್ಬಾವಿ, ಹಾಗೂ ದಕ್ಷಿಣ ಕರ್ನಾಟಕದ ಕಿಬ್ಬನಹಳ್ಳಿಯಲ್ಲಿ ಪ್ರತಿನಿಧಿಸಲ್ಪಟ್ಟಿದೆ. ಬ್ಲೇಡ್ ಹಾಗೂ ಮೊನಚು ತುದಿಯನ್ನುಳ್ಳ ತೆಳುವಾದ ಕಲ್ಲಿನ ಚಕ್ಕೆಗಳನ್ನು ಬಳಸಿ ಮಾಡಲಾದ ಸಲಕರಣೆಗಳ ಬಳಕೆಯ ವೈಶಿಷ್ಟ್ಯವನ್ನು ಪಡೆದಿದೆ. ಇಲ್ಲಿ, ಸಂಸ್ಕೃತಿಯ ಇತರ ಅಂಶಗಳ ಯಾವುದೇ ಕುರುಹುಗಳು ದೊರೆತಿಲ್ಲ. ಆದರೆ, ಬೇರೆಡೆಯಲ್ಲಿ ಇದೇ ರೀತಿಯ ಸಾಂಸ್ಕೃತಿಕ ಹಂತಗಳಿಂದ ದೊರೆತ ವಿವರಣೆಗಳಿಂದ, ಇಂದಿನ ಮಾನವರೆಲ್ಲರಿಗೂ ಸಂಬಂಧಿಸಿದ ಹೋಮೋ–ಸೇಪಿಯನ್ಸ್ ಮಾನವ ಪ್ರಾರಂಭಿಕ ದರ್ಶನವು ಈ ಹಂತದಲ್ಲಿ ಆಗಿದೆ. ಶಿಲ್ಪಕಲೆ, ವರ್ಣಚಿತ್ರ, ನೃತ್ಯ ಸಂಗೀತಗಳು, ಹಾಗೂ ಮೃತರನ್ನು ಗೌರವಯುತ ರೀತಿಯಲ್ಲಿ ಅಂತ್ಯಕ್ರಿಯೆ ನಡೆಸುವ ಪ್ರಾರಂಭದ ಹಂತವನ್ನು ನೋಡಬಹುದಾಗಿದ್ದು, ಇವು ಮಾನವ ಸಂಸ್ಕೃತಿಯ ಸೂಕ್ಷ್ಮ ಅಂಶಗಳ ಪ್ರಕಟಣೆಯ ಪ್ರಾರಂಭಿಕ ಘಟನೆಗಳಾಗಿದ್ದವು. ಬೇರೆಡೆಯಂತೆ, ಈ ಸಂಸ್ಕೃತಿಯು ಕ್ರಿ.ಪೂ.೪೦,೦೦೦–೧೦,೦೦೦ದವರೆಗೆ ಮುಂದುವರಿದಂತೆ ತೋರುತ್ತದೆ. ಈ ಘಟ್ಟದಿಂದ ಮುಂದೆ, ಹೋಮೋ–ಸೇಪಿಯನ್ಸ್ ಅಲ್ಲದೆ, ಯಾವುದೇ ಹೋಮಿನಿಡ್ ರೀತಿಗಳು ಜಗತ್ತಿನಲ್ಲಿ ಎಲ್ಲೂ ಕಂಡಿಲ್ಲ. ಬಹುಶಃ, ಇದು ಕರ್ನಾಟಕಕ್ಕೂ ಅನ್ವಯಿಸುತ್ತದೆ

**ಮೆಸೋಲಿಥಿಕ್ ಯುಗ:** ಅಂತ್ಯ ಶಿಲಾಯುಗದ ನಂತರ ಬಂದ ಮೆಸೋಲಿಥಿಕ್ ಯುಗವು, ಮೈಕ್ರೋಲಿಥ್‌ಗಳೆಂಬ ಅತ್ಯಂತ ಚಿಕ್ಕದಾದ ಕಲ್ಲಿನ ಸಲಕರಣೆಗಳ ಬಳಕೆಯಿಂದ ಗುರುತಿಸಲ್ಪಟ್ಟಿದೆ. ಸಾಮಾನ್ಯ ತ್ರಿಕೋನಾಕಾರ, ಆಯತಾಕಾರ ಹಾಗೂ ಅರ್ಧ–ಚಂದ್ರಾಕಾರದ ರೀತಿಯ ಹಾಗೂ ಜ್ಯಾಮಿತಿಯೇತರ ಅಸ್ಪಷ್ಟಾಕಾರವುಳ್ಳ ರೀತಿಗಳೂ ಇದರಲ್ಲಿ ಸೇರ್ಪಡೆಯಾಗಿದೆ. ಸಲಕರಣೆಗಳನ್ನು ತಯಾರಿಸಲು ಕಲ್ಲುಗಳನ್ನು ಬಳಸುವುದು ಮುಂದುವರಿದರೂ, ಶ್ರಮದ ಮಿತವ್ಯಯ ಹಾಗೂ ಹೆಚ್ಚಿನ ಕಾರ್ಯಕ್ಷಮತೆಯನ್ನು ಸಾಧಿಸಲಾಗಿತ್ತು. ಕರ್ನಾಟಕದಲ್ಲಿ, ಈ ಸಾಂಸ್ಕೃತಿಕ ಹಂತವು ರಾಜ್ಯದ ಬಹುತೇಕ ಎಲ್ಲ ಪ್ರದೇಶಗಳಿಂದ ನಿರೂಪಿತವಾಗಿದೆ, ಇದರಲ್ಲಿ ಕೆಲವು ಮುಖ್ಯ ತಾಣಗಳೆಂದರೆ ಕಿಬ್ಬನಹಳ್ಳಿ, ಜಾಲಹಳ್ಳಿ, ಸಂಗನಕಲ್, ಬ್ರಹ್ಮಗಿರಿ, ಇಂಗಳೇಶ್ವರ, ಹಿಂಗೋಳಿ, ಇತ್ಯಾದಿ.ಈ ಸಂಸ್ಕೃತಿಯನ್ನು ಕುರಿತಾಗಿ ಕಲ್ಲಿನ ಸಲಕರಣೆಗಳನ್ನು ಹೊರತುಪಡಿಸಿ ಇತರ ಯಾವುದೇ ವಿವರಗಳು ಲಭ್ಯವಿಲ್ಲದಿದ್ದರೂ, ಜೀವನಕ್ಕಾಗಿ ಬೇಟೆ ಹಾಗೂ ಆಹಾರ ಶೇಖರಣೆ

*ಶಿಲಾಯುಧಗಳು, ನೂತನ ಶಿಲಾಯುಗದ, ತೇರನಹಳ್ಳಿ, ಕೋಲಾರ ಜಿಲ್ಲೆ*



ಹಾಗೂ ಬಹುಶಃ ಮೀನು ಹಿಡಿಯುವುದು ಈ ಹಂತದ ನಿಯಮಿತ ಕಸುಬಾಗಿತ್ತು.ಕರ್ನಾಟಕದಲ್ಲಿ, ಈ ಸಂಸ್ಕೃತಿಯು ಕ್ರಿ.ಪೂ.೩,೦೦೦ದವರೆಗೂ ಇದ್ದಂತೆ ತೋರುತ್ತದೆ.ಆ ನಂತರದ ಅವಧಿಯಲ್ಲೂ, ನಿಯೋಲಿಥಿಕ್ ಹಾಗೂ ಚಾಲ್ಕೋಲಿಥಿಕ ಮಟ್ಟಗಳಲ್ಲಿ ಮೈಕ್ರೋಲಿಥ್ (ಸುಷ್ಮ ಶಿಲಾಯುಧ)ಗಳು ಬೆರೆತಿರುವುದು ಕಂಡುಬರುತ್ತದೆ.

**ನವಶಿಲಾ (ನಿಯೋಲಿಥಿಕ್) ಯುಗ:** ಆಹಾರ ಉತ್ಪಾದನೆಯ ನವೀನ ಆರ್ಥಿಕ ವ್ಯವಸ್ಥೆ, ಕೃಷಿ ಹಾಗೂ ಪ್ರಾಣಿಗಳ ಸಾಕಣೆಯಿಂದ ಗುರುತಿಸಲ್ಪಡುವ ಮಾನವನ ಸಾಂಸ್ಕೃತಿಕ ವಿಕಾಸದಲ್ಲಿ ನಿಖರವಾದ ಮುನ್ನಡೆಯನ್ನು ನಿಯೋಲಿಥಿಕ್ ಹಂತವು ಪ್ರತಿನಿಧಿಸುತ್ತದೆ. ಈ ಮೊದಲಿನ ಅಲೆಮಾರಿ, ಆಹಾರ ಶೇಖರಣಾ ಆರ್ಥಿಕತೆಗೆ ಇದು ವಿಭಿನ್ನವಾಗಿತ್ತು. ಈ ಅವಧಿಯಲ್ಲಿ, ಅಲೆಮಾರಿ ಜೀವನವನ್ನು ನಡೆಸುವ ಬದಲು, ಜನರು ಗ್ರಾಮಗಳಲ್ಲಿ ನೆಲೆಸಲು ಪ್ರಾರಂಭಿಸಿದರು. ಕರ್ನಾಟಕದೆಲ್ಲೆಡೆ, ಈ ಹಂತಕ್ಕೆ ಸೇರಿದ ಬಹುಸಂಖ್ಯೆಯ ತಾಣಗಳಿಂದ ನಿಯೋಲಿಥಿಕ್ ಯುಗವು ಪ್ರತಿನಿಧಿತವಾಗಿದೆ.ಅವುಗಳಲ್ಲಿ ಪಿಕ್ಲಿಹಾಳ, ಕೊಡೆಕಲ್, ವಟ್ಗಲು, ಸಂಗನಕಲ್, ಬ್ರಹ್ಮಗಿರಿ, ಟಿ.ನರಸೀಪುರ ಹಾಗೂ ಹಳ್ಳೂರುಗಳಲ್ಲಿ ಉತ್ಖನನಗಳೂ ನಡೆದಿವೆ.ಈ ಹಂತದಲ್ಲಿ, ಕಲ್ಲಿನ ಸಲಕರಣೆಗಳನ್ನು ಬಳಸುವುದನ್ನು ಮುಂದುವರಿಸಿದರೂ ಅವುಗಳನ್ನು ಉಜ್ಜಿ, ನುಣಪು ಮಾಡಲಾಗುತ್ತಿತ್ತು.ಮರಗಳನ್ನು ಕಡಿಯಲು, ಮರದ ಕೆಲಸ ಮಾಡಲು, ಹಾಗೂ ಜೋಳವನ್ನು ಹಿಟ್ಟು ಮಾಡಲು, ಇತ್ಯಾದಿಗಳಿಗಾಗಿ ಬಳಸಲಾಗುತ್ತಿದ್ದ ಬಹುತೇಕ ಕಲ್ಲಿನ ಸಲಕರಣೆಗಳು ಕೊಡಲಿ ಹಾಗೂ ಕೈಬಾಚಿಗಳಾಗಿದ್ದವು. ಬೆಳೆಗಳಲ್ಲಿ, ರಾಗಿಯು ಮುಖ್ಯ ಆಹಾರವಾಗಿತ್ತು, ಆದರೆ ಹೆಸರು ಹಾಗೂ ಹುರಳಿಗಳನ್ನೂ ಬೆಳೆಯುತ್ತಿದ್ದರು. ದನ, ಕುರಿ ಹಾಗೂ ಮೇಕೆಗಳನ್ನು ಸಾಕಣೆ

ಮಾಡಲಾಯಿತು.ಅಡುಗೆಯ ಮಡಕೆಗಳು, ಬಟ್ಟಲುಗಳು, ಪಾತ್ರೆಗಳು, ಮೊದಲಾದ ರೂಪದಲ್ಲಿ ಕೈಯಲ್ಲಿ ಮಾಡಿದ ಮಣ್ಣಿನ ಪಾತ್ರೆಗಳ ನಿಯಮಿತ ಬಳಕೆ ಆಗುತ್ತಿತ್ತು. ಮಣ್ಣು ಅಥವಾ ತಡಿಕೆ ಹಾಗೂ ಲೇಪನದ ಗೋಡೆಗಳಿರುವ ವೃತ್ತಾಕಾರದ ಗುಡಿಸಿಲುಗಳಲ್ಲಿ ಜನರು ಜೀವಿಸುತ್ತಿದ್ದರು.ಅನೇಕ ಸ್ಥಳಗಳಲ್ಲಿ, ಮೃತರನ್ನು ಮನೆಯೊಳಗೇ ಸಮಾಧಿ ಮಾಡುತ್ತಿದ್ದರೆನ್ನಲು ಸಾಕ್ಷಿಗಳು ಸಿಕ್ಕಿವೆ.ಮಕ್ಕಳನ್ನು ಮಡಕೆಗಳಲ್ಲಿಟ್ಟು ಹೂಳುತ್ತಿದ್ದರು. ಆ ಪ್ರಾರಂಭಿಕ ಶವಸಂಸ್ಕಾರಗಳಲ್ಲಿ ದೊರೆತ ಅಸ್ತಿಪಂಜರದ ಅವಶೇಷಗಳು ಈ ಅವಧಿಯಲ್ಲಿ ಜೀವಿಸಿದ್ದ ಜನರು, ಕರ್ನಾಟಕದಲ್ಲಿ ಇಂದು ಇರುವ ಜನರಿಬ್ಬರೂ ಒಂದೇ ಜನಾಂಗದ ತಳಿಗೆ ಸೇರಿದವರೆಂದು ತೋರಿಸಿವೆ.ಗ್ರಾಮೀಣ ಕರ್ನಾಟಕದಲ್ಲಿ ಇಂದಿಗೂ ನೂತನ ಶಿಲಾಯುಗ ಸಂಸ್ಕೃತಿಯ ಅನೇಕ ಅಂಶಗಳು ಉಳಿದುಕೊಂಡಿವೆ.

**ತಾಮ್ರ ಶಿಲಾ (ಚಾಲ್ಕೋಲಿಥಿಕ್) ಯುಗ ಸಂಸ್ಕೃತಿ:** ಮನುಕುಲವು ಬಳಸಿದ ಮೊಟ್ಟಮೊದಲ ಲೋಹವಾದ ತಾಮ್ರದ ಬಳಕೆಯು. ಯುಗದ ಹೆಗ್ಗುರುತಾಗಿದೆ. ಕರ್ನಾಟಕದಲ್ಲಿ ಅದರ ಬಳಕೆ ತಿಳಿದಿದ್ದರೂ, ಲೋಹದ ವಿಸ್ತೃತ ಬಳಕೆಯು ಇದ್ದಂತೆ ತೋರುವುದಿಲ್ಲ. ಜನರು ನೂತನ ಶಿಲಾಯುಗ ಸಂಸ್ಕೃತಿಯ ಜೀವನ ವಿಧಾನವನ್ನು ಮುಂದುವರಿಸಿದರು. ಹಾಗಾಗಿ, ಅನೇಕ ವಿದ್ವಾಂಸರು ಇದನ್ನು ನಿಯೋಲಿಥಿಕ್‌ನ ನೈಸರ್ಗಿಕ ನಿರಂತರತೆ ಎಂದು ಪರಿಗಣಿಸಿದ್ದು, ಅದನ್ನು ನಿಯೋಲಿಥಿಕ್–ಚಾಲ್ಕೋಲಿಥಿಕ್ ಎಂದು ಕರೆದರು.ಈ ಹಂತವು ಕ್ರಿ.ಪೂ.೧,೨೦೦ರವರೆಗೂ ಮುಂದುವರಿದಂತೆ ತೋರುತ್ತದೆ. ಚಕ್ರ–ತಯಾರಿತ ಹಾಗೂ ಬಣ್ಣ ಬಳಿದ ಕುಂಬಾರಿಕೆಯು ಈ ಹಂತದಲ್ಲಿ ಕಂಡ ವೈಶಿಷ್ಟ್ಯಪೂರ್ಣ ಅಂಶವಾಗಿದೆ.

**ಕಬ್ಬಿಣದ ಯುಗ ಅಥವಾ ಮೆಗಾಲಿಥಿಕ್ ಯುಗ:** ಹೆಸರೇ ಸೂಚಿಸುವಂತೆ, ಮಾನವ ಚರಿತ್ರೆಯಲ್ಲಿ ಬೃಹತ್ ಬದಲಾವಣೆಗಳನ್ನು ತಂದ ಲೋಹವಾದ ಕಬ್ಬಿಣದ ಬಳಕೆಯು ಈ ಅವಧಿಯ ಹೆಗ್ಗುರುತಾಗಿರುವುದು ತಿಳಿದುಬರುತ್ತದೆ. ಕಬ್ಬಿಣ ತಂತ್ರಜ್ಞಾನದಿಂದ, ಹೆಚ್ಚು ಪರಿಣಾಮಕಾರಿಯಾದ ಸಲಕರಣೆಗಳನ್ನು ತಯಾರಿಸಲಾಯಿತು ಇದರಿಂದಾಗಿ ಉತ್ಪಾದಕತೆಯು ಎಲ್ಲ ಕ್ಷೇತ್ರಗಳಲ್ಲೂ ಹೆಚ್ಚಿತು. ಕಬ್ಬಿಣವನ್ನು ಆಯುಧಗಳನ್ನು ಮಾಡಲು ಬಳಸಲಾಗುತ್ತಿದ್ದು, ಈ ತಂತ್ರಜ್ಞಾನದ ನಿಯಂತ್ರಣವಿರುವ ಹಾಗೂ ಈ ಆಯುಧಗಳನ್ನು ಹೊಂದಿದವರು, ಇತರರ ಮೇಲೆ ಮೇಲುಗೈ ಸಾಧಿಸಿದರು. ಬಹುಶಃ, ಉಳ್ಳವರು ಹಾಗೂ ಇಲ್ಲದವರ ಮಾನವ ಸಮಾಜಗಳ ಪ್ರಥಮ ನಿಯಮಿತ ಸ್ತರೀಕರಣವು ಈ ಯುಗದಲ್ಲಿ ಪ್ರಾರಂಭವಾಯಿತೆಂದು ತೋರುತ್ತದೆ.

ಕರ್ನಾಟಕದಲ್ಲಿ ಕಬ್ಬಿಣದ ಯುಗಕ್ಕೆ ಸೇರಿದ ಅವಶೇಷಗಳ ವಿಚಿತ್ರ ಅಂಶವೆಂದರೆ, ಅಷ್ಟಾಗಿ ಕಬ್ಬಿಣದ ಯುಗದ ವಸತಿ ತಾಣಗಳು ದೊರೆಯದಿದ್ದರೂ, ನೂರಾರು ಸ್ಮಶಾನ ನೆಲೆಗಳು ದೊರೆತಿವೆ. ಈ ಅವಧಿಯಲ್ಲಿ, ನಿಯಮಿತ ವಾಸದ ತಾಣಗಳಿಂದ ದೂರವಿದ್ದ ಪ್ರತ್ಯೇಕ ಸ್ಮಶಾನಗಳಲ್ಲಿ ಮೃತರನ್ನು ಹೂಳಲಾಗುತ್ತಿತ್ತು. ಮೃತ ದೇಹವನ್ನು ಬೇರೆಡೆ ತೆರೆದಿಟ್ಟು, ಕೆಲಕಾಲದ ನಂತರ ಅದರ ಬುರುಡೆ ಹಾಗೂ ಕೆಲವು ಉದ್ದದ ಮೂಳೆಗಳನ್ನು ಮಾತ್ರ ಶೇಖರಿಸಿ, ಅದನ್ನು ವಿಧಿವಿಧಾನಗಳೊಂದಿಗೆ ಸಮಾಧಿ ಮಾಡಲಾಗುತ್ತಿತ್ತು. ಈ ಅವಧಿಯ ಶವ ಸಂಸ್ಕಾರದ ಗುಳಿಗಳನ್ನು ಬಂಡೆಗಳು ಸಾಮಾನ್ಯವಾಗಿ ವೃತ್ತಾಕಾರದಲ್ಲಿ ಸುತ್ತುವರಿದಿರುತ್ತಿದ್ದರಿಂದ, ಅದನ್ನು ಮೆಗಾಲಿಥ್‌ಗಳೆಂದು ಕರೆಯಲಾಗುತ್ತದೆ.

ಸ್ಮಶಾನದ ಕಟ್ಟಡ ವಿನ್ಯಾಸದಲ್ಲೂ ವೈವಿಧ್ಯತೆಗಳಿದ್ದವು.ಕೆಲವನ್ನು ಸಾಮಾನ್ಯ ಗುಂಡಿಗಳನ್ನಗೆದು ಹೂಳುತ್ತಿದ್ದು, ಮೂಳೆಗಳನ್ನು ಆಳವಾದ ಗುಂಡಿಗಳಲ್ಲಿ ಹೂಳಿ ಹಾಗೂ ಅದನ್ನು ಮಣ್ಣು ಹಾಗೂ ಕಲ್ಲುಗುಡ್ಡೆ ಗಳಿಂದ ಮುಚ್ಚಿ, ಕಲ್ಲಿನ ವೃತ್ತವನ್ನು ರೂಪಿಸಲಾಗುತ್ತಿತ್ತು. ಮತ್ತೊಂದು ರೀತಿ ಎಂದರೆ ಶವಸಂಪುಟದ/ಸಿಸ್ಟ್ ಶವಸಂಸ್ಕಾರ. ಸಿಸ್ಟ್ ಎಂದರೆ, ನೆಲ; ಪಕ್ಕದ ಗೋಡೆಗಳು ಹಾಗೂ ಛಾವಣಿಗೆ (ಮೇಲಿನ ಕಲ್ಲು) ಆಧಾರವಾಗಿ ಗ್ರಾನೈಟ್ ಚಪ್ಪಡಿಗಳನ್ನು ಬಳಸಿ ಮಾಡಿದ ಸಣ್ಣ ಚೌಕಾಕಾರದ ಅಥವಾ ಆಯಾಕಾರದ ಪ್ರಾಕಾರ. ಅಸ್ತಿಪಂಜರದ ಅವಶೇಷಗಳನ್ನು ಇವುಗಳ ಒಳಗೆ ಇರಿಸಲಾಗುತ್ತಿತ್ತು. ಸಾಮಾನ್ಯವಾಗಿ ಈ ಸಿಸ್ಟ್‌ಗಳ ಪಕ್ಕದ ಚಪ್ಪಡಿಗಳೊಂದರಲ್ಲಿ (ಜೀರುಗಂಡಿಯ ಸಿಸ್ಟ್), ವೃತ್ತಾಕಾರದ ರಂಧ್ರವನ್ನು ಒದಗಿಸಲಾಗುತ್ತಿತ್ತು; ಬಹುಶಃ ಆಗಾಗ ಮೃತರಿಗೆ ಅರ್ಪಣೆಗಳನ್ನು ಸಲ್ಲಿಸಲು ಇದನ್ನು ಬಳಸಲಾಗುತ್ತಿತ್ತು. ಇವುಗಳಲ್ಲಿ ಕೆಲವು ಹೆಚ್ಚು ವಿಸ್ತಾರವಾಗಿ ಇರುತ್ತಿದ್ದವು. ಸಿಸ್ಟ್‌ಗಳನ್ನು ಮೇಲ್ಮೈಯ ಕೆಳಗೆ ಸ್ಥಾಪಿಸಿ, ಅದಕ್ಕೆ ಹಾದು ಹೋಗುವ ಮಾರ್ಗವನ್ನು ಮಾಡಲಾಗುತ್ತಿತ್ತು. ಇವುಗಳನ್ನು ಸಂಪುಟ ಸಮಾಧಿಗಳು ಎಂದು ಕರೆಯುತ್ತಾರೆ. ಇವೆಲ್ಲವೂ ಕಲ್ಲಿನ ವೃತ್ತದ ಒಳಗೆ ಇರುತ್ತಿದ್ದು ಅನೇಕ ಬಾರಿ ಕಲ್ಲುಗುಡ್ಡೆಗಳಿಂದ ಆವೃತವಾಗಿರುತ್ತವೆ. ಅಸ್ತಿಪಂಜರದ ಅವಶೇಷಗಳೊಂದಿಗೆ, ಕಬ್ಬಿಣದ ಅಯುಧಗಳಾದ ಖಡ್ಗ ಹಾಗೂ ಹಗುರವಾದ ಈಟಿ, ಕೃಷಿ ಸಲಕರಣೆ, ಬಳೆ, ಮಣಿ ಹಾಗೂ ಆಭರಣಗಳಲ್ಲದೆ, ಮಣ್ಣಿನ ಪಾತ್ರೆಗಳಲ್ಲಿ ಇರಿಸಿದ ಆಹಾರ ಹಾಗೂ ಪಾನೀಯಗಳೂ ಸೇರಿದಂತೆ, ಮೃತರಿಗೆ ಅನೇಕ ವಸ್ತುಗಳನ್ನು ಅರ್ಪಿಸಲಾಗುತ್ತಿತ್ತು. ಈ ಶವಸಂಸ್ಕಾರದ ತಾಣಗಳಿಂದ ಪಡೆದ ಮಡಕೆಗಳು ಚಕ್ರಬಳಸಿ ಮಾಡಿದವಾಗಿದ್ದು, ಭಾಗಶಃ ಕಪ್ಪು ಹಾಗೂ ಭಾಗಶಃ ಕೆಂಪು ಬಣ್ಣದಲ್ಲಿ ಇದ್ದು, ಅದನ್ನು ಕಪ್ಪು–ಹಾಗೂ–ಕೆಂಪು ವರ್ಣದ ಮಡಕೆಗಳು ಎಂದು ಅನೇಕ ಬಾರಿ ವಿವರಿಸಲಾಗಿದೆ.

ಬೃಹತ್ ಶಿಲಾಯುಗ ಸಂಸ್ಕೃತಿಯ ನಿಜವಾದ ಸ್ವರೂಪವನ್ನು ಇನ್ನೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಇನ್ನೂ ಅಲೆಮಾರಿಗಳಾಗಿದ್ದ, ಆದರೆ ತಮ್ಮ ಕಬ್ಬಿಣದ ತಂತ್ರಜ್ಞಾನದಿಂದ ಆ ಮೊದಲಿನ ನಿಯೋಲಿಥಿಕ್–ಚಾಲ್ಕೊಲಿಥಿಕ್ ನಿವಾಸಿಗಳ ಮೇಲೆ ತಮ್ಮ ಪ್ರಭಾವವನ್ನು ಸ್ಥಾಪಿಸಿದ ಈ ಮಂದಿಯನ್ನು ಕೆಲವರು, ಬೇರೆಡೆಯಿಂದ ಹೊಸದಾಗಿ ಬಂದ ವಲಸಿಗರೆಂದು ಪರಿಗಣಿಸುತ್ತಾರೆ. ಕೆಲವರ ಪ್ರಕಾರ ಇದು ಕೇವಲ ಆ ವೇಳೆಗಾಗಲೇ ಕಬ್ಬಿಣದ ತಂತ್ರಜ್ಞಾನದ ನಿಯಂತ್ರಣವನ್ನು ಪಡೆದ ಸ್ಥಳೀಯ ಜನರು ನೂತನ ಸಾಂಸ್ಕೃತಿಕ ವಿಧಾನಗಳನ್ನು ಅಳವಡಿಸಿಕೊಂಡಿದ್ದ ಫಲವಾಗಿ ಉಂಟಾದ ಮಾರ್ಪಾಡು ಎಂದು ಅಭಿಪ್ರಾಯಪಟ್ಟಿದ್ದಾರೆ. ಮೆಗಾಲಿಥ್‌ಗಳಿಂದ ದೊರೆತ ಹಲವಾರು ಅಸ್ತಿಪಂಜರದ ಪಳೆಯುಳಿಕೆಗಳನ್ನು ಪರಿಶೀಲಿಸಿದ ಮಾನವಶಾಸ್ತ್ರಜ್ಞರು, ಇಂದಿನ ಜನರ ಜನಾಂಗೀಯ ಸಂಯೋಜನೆ ಗಿಂತ ಈ ಪಳೆಯುಳಿಕೆಗಳು ವ್ಯತ್ಯಾಸವನ್ನು ತೋರಿಸುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.


ಬೃಹತ್ ಶಿಲಾಯುಗದ ಸಮಾಧಿಗಳು ಹಿರೆಬೆಣಕಲ್, ಕೊಪ್ಪಳ ಜಿಲ್ಲೆ



ಕನಗನಹಳ್ಳಿಯ ಬೌದ್ಧ ಸ್ತೂಪ, ಗುಲಬರ್ಗಾ ಜಿಲ್ಲೆ



ಇಟ್ಟಿಗೆಯ ಜೈನ ಬಸದಿಯ ಉತ್ಖನನ ನೆಲೆ, ಮೈಸೂರು ಜಿಲ್ಲೆ



ಚಾವುಂಡರಾಯ ಬಸದಿ, ಶ್ರವಣಬೆಳಗೊಳ, ಹಾಸನ ಜಿಲ್ಲೆ

ಸುಮಾರು ಕ್ರಿ.ಪೂ.೧೨೦೦ರಿಂದ ಕರ್ನಾಟಕದಲ್ಲಿ ಕಬ್ಬಿಣವನ್ನು ಬಳಸುತ್ತಿದ್ದರೆಂದು ತೋರುತ್ತದೆ. ಕ್ರಿ.ಪೂ.೧೨೦೦ರಿಂದ ಕ್ರಿ.ಶ.೩೦೦ರವರೆಗೆ ಅಸ್ತಿತ್ವದಲ್ಲಿದ್ದ ಮೆಗಾಲಿಥಿಕ್ ಸಂಸ್ಕೃತಿಯ ನಂತರ, ಇತಿಹಾಸಯುಗವು ಪ್ರಾರಂಭವಾದಂತೆ ತೋರುತ್ತದೆ.

**ಪ್ರಾರಂಭಿಕ ಅವಧಿ**

ಕ್ರಿ.ಪೂ. ನಾಲ್ಕರಿಂದ ಕ್ರಿ.ಶ.ಆರನೆಯ ಶತಮಾನಗಳ ನಡುವಿನ ಅವಧಿಯನ್ನು, ಕರ್ನಾಟಕದ ಚರಿತ್ರೆ ಹಾಗೂ ಸಂಸ್ಕೃತಿಗಳು ರೂಪುಗೊಂಡ ಅವಧಿಯೆಂದು ಪರಿಗಣಿಸಬಹುದು. ಕ್ರಿ.ಪೂ.ನಾಲ್ಕನೆಯ ಶತಮಾನದಲ್ಲಿ, ನಂದರ ಆಳ್ವಿಕೆಯಲ್ಲಿದ್ದ ಉತ್ತರ ಭಾರತದ ಮಗಧ ಸಾಮ್ರಾಜ್ಯದ ಆಧಿಪತ್ಯದಡಿಗೆ ಕರ್ನಾಟಕದ ಪ್ರಮುಖ ಪ್ರದೇಶಗಳು ಬಂದವು. ಭಾರತದ ಪ್ರಥಮ ಸಾಮ್ರಾಜ್ಯವಾದ ಮಗಧ ಸಾಮ್ರಾಜ್ಯದ ಉದಯದೊಡನೆ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಉಂಟಾದ ಬದಲಾವಣೆಗಳು, ಕರ್ನಾಟಕದಲ್ಲೂ ಹಲವಾರು ಬದಲಾವಣೆಗಳನ್ನು ಉಂಟು ಮಾಡಿತು.

ಉತ್ತರ ಭಾರತದ ನಂದರು ಹಾಗೂ ಮೌರ್ಯರ ಕರ್ನಾಟಕದ ಸಂಪರ್ಕವು, ರಾಜ್ಯದಲ್ಲಿ ಅನೇಕ ಅಭಿವೃದ್ಧಿ, ಬದಲಾವಣೆಗಳಿಗೆ ದಾರಿ ಮಾಡಿಕೊಟ್ಟಿತು. ಸ್ಥಿರತೆ ಹಾಗೂ ಶಾಂತಿಯಿಂದ ಕೂಡಿದ್ದ ಅವರ ಆಳ್ವಿಕೆಯ ಅವಧಿಯು, ಇಲ್ಲಿನ ವ್ಯಾಪಾರ ಹಾಗೂ ವಾಣಿಜ್ಯದ ಅಭಿವೃದ್ಧಿಗೆ ಬೃಹತ್ ಪ್ರಚೋದನೆಯನ್ನು ನೀಡಿತು.ಅಲ್ಲದೆ, ಧಾರ್ಮಿಕ ಕ್ಷೇತ್ರದಲ್ಲಿ, ಉತ್ತರ ಭಾರತದಲ್ಲಿ ಜನಿಸಿದ ಬೌದ್ಧ, ಜೈನ ಹಾಗೂ ಹಿಂದೂ ಧರ್ಮಗಳು ದಕ್ಷಿಣ ಭಾರತಕ್ಕೂ ಹರಡಿದವು. ಬಹುತೇಕವಾಗಿ, ರೈತ ಹಾಗೂ ಬುಡಕಟ್ಟು ಗುಂಪುಗಳ ಆವಾಸವಾಗಿದ್ದ ಕರ್ನಾಟಕವು, ಅಖಿಲ-ಭಾರತದ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಹಂದರವನ್ನು ಪ್ರವೇಶಿಸಿತು.ಮೊದಲ ಬಾರಿಗೆ, 'ಪ್ರಾದೇಶಿಕ ರಾಜ್ಯ'ದ ಅಂಕುರವನ್ನು ಕರ್ನಾಟಕವು ಕಾಣತೊಡಗಿತು.ಈ ಬೆಳವಣಿಗೆಗಳಾದರೂ, ನಂದರು ಹಾಗೂ ಮೌರ್ಯರು 'ಹೊರಗಿನವರಾಗೇ' ಉಳಿದರು, ಏಕೆಂದರೆ, ಅವರು ದೂರದ ರಾಜಧಾನಿಗಳಿಂದ ಆಳ್ವಿಕೆ ನಡೆಸುತ್ತಿದ್ದರು.

ಕ್ರಿ.ಪೂ.ಎರಡನೆಯ ಶತಮಾನದಿಂದ ಕ್ರಿ.ಶ.ಎರಡನೆಯ ಶತಮಾನದವರೆಗೆ 'ಹೊರಗಿನವರು' ಕರ್ನಾಟಕವನ್ನು ಆಳುವುದು ಮುಂದುವರೆಯಿತು; ತಮ್ಮ ಸಾಮಂತರೊಡನೆ ಈ ಸಮಯದಲ್ಲಿ ಕರ್ನಾಟಕವನ್ನು ಆಳಿದ ಶಾತವಾಹನರು, ನೆರೆಯ ದೇಶಗಳೊಂದಿಗೆ ವ್ಯಾಪಾರ ಹಾಗೂ ವಾಣಿಜ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು, ಕರಾವಳಿ ಕರ್ನಾಟಕದ ಬಂದರುಗಳನ್ನು ಬಳಸತೊಡಗಿದರು. ಈ ಪ್ರದೇಶದಲ್ಲಿ ವ್ಯಾಪಾರ ಚಟುವಟಿಕೆಯು ಅಭಿವೃದ್ಧಿಯಾಗಲು ಇದು ನಾಂದಿ ಹಾಡಿತು. ಶಾತವಾಹನರ ಕಾಲದಲ್ಲಿ, ಬೌದ್ಧ, ಜೈನ ಹಾಗೂ ಹಿಂದೂ ಧರ್ಮಗಳು ಒಟ್ಟೊಟ್ಟಿಗೆ ಸಾಮರಸ್ಯದಿಂದ ಇದ್ದು, ರಾಜ್ಯದಲ್ಲಿ ಧಾರ್ಮಿಕ ಸಹಿಷ್ಣುತೆ ಹಾಗೂ ಶಾಂತಿಯುತ ವಾತಾವರಣವು ನೆಲೆಸಿ ಈ ಪ್ರದೇಶದ ಒಟ್ಟಾರೆ ಅಭಿವೃದ್ಧಿ ಹಾಗೂ ಆರ್ಥಿಕ ಹಾಗೂ ಸಾಂಸ್ಕೃತಿಕ



ಅಶೋಕನ ಶಿಲಾಶಾಸನ, ಕೊಪ್ಪಳ ಜಿಲ್ಲೆ

ಔನ್ನತ್ಯಕ್ಕೆ ಬಹುಶಃ ನಾಂದಿ ಹಾಡಿತು.ಸನ್ನತಿ ಹಾಗೂ ಬನವಾಸಿಯಲ್ಲಿ ದೊರೆತ ಈ ಅವಧಿಯ ಶಿಲ್ಪಕಲೆ ಹಾಗೂ ಕಟ್ಟಡ ಸ್ಮಾರಕಗಳಲ್ಲಿ ಇದು ಸ್ಪಷ್ಟವಾಗಿ ಪ್ರತಿಬಿಂಬಿತವಾಗಿದೆ.ಶಾತವಾಹನರ ನಂತರ, ಕಂಚಿಯ ಪಲ್ಲವರು ಅಲ್ಪಾವಧಿಗೆ ಕರ್ನಾಟಕವನ್ನು ಆಳಿದರು.

ಹೊರಗಿನ ರಾಜವಂಶಗಳ ಸುಮಾರು ಆರು ಶತಮಾನಗಳ ಕಾಲದ ಕರ್ನಾಟಕದ ಆಳ್ವಿಕೆಯ ನಂತರವೇ, ಅದು ತನ್ನ ಅನನ್ಯತೆ/ಸ್ವಂತ ವ್ಯಕ್ತಿತ್ವ ಹಾಗೂ ಸಾಂಸ್ಕೃತಿಕ ಸ್ಮೃತಿಯನ್ನು ಸ್ಥಾಪಿಸಲು ಮುಂದಾಯಿತು.ನಂತರ, ಹೊರಗಿನಿಂದ ಬಂದ ಅರಸರ ವಿರುದ್ಧ ದಂಗೆ ಪ್ರಾರಂಭವಾದಾಗ, ಕ್ರಿ.ಶ.ನಾಲ್ಕನೆಯ ಶತಮಾನದಲ್ಲಿ ಮೊದಲನೆಯ ಬಾರಿಗೆ ಬನವಾಸಿಯ ಕದಂಬರು ಹಾಗೂ ತಲಕಾಡಿನ ಗಂಗರು ಕರ್ನಾಟಕದಲ್ಲಿ ತಮ್ಮ ರಾಜ್ಯಗಳನ್ನು ಸ್ಥಾಪಿಸಿದರು.


ಕದಂಬರು ಕರ್ನಾಟಕದ ಉತ್ತರ ಭಾಗಗಳನ್ನು ಆಳಿದರೆ, ಗಂಗರು ರಾಜ್ಯದ ದಕ್ಷಿಣದ ಭಾಗದಲ್ಲಿ ತಮ್ಮನ್ನು ಪ್ರತಿಷ್ಠಾಪಿಸಿಕೊಂಡರು.ಯುದ್ಧದ ವಿಜಯಗಳ ಮೂಲಕ ತಮ್ಮ ರಾಜ್ಯಗಳನ್ನು ವಿಸ್ತರಿಸಿಕೊಳ್ಳುವುದಲ್ಲದೆ, ಗುಪ್ತರವಾಕಟಕ ಹಾಗೂ ಪಲ್ಲವರ ಸಾಮ್ರಾಜ್ಯಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವ ಮೂಲಕವೂ ತಮ್ಮನ್ನು ತಾವು ಬಲಪಡಿಸಿಕೊಂಡರು. ಈ ಅವಧಿಯಲ್ಲಿ, ವೇದೀಯ ಹಿಂದುತ್ವವನ್ನು ಬಹುಮಟ್ಟಿಗೆ ಉತ್ತೇಜಿಸಲಾಯಿತು. ಈ ಕದಂಬ-ಗಂಗ ಕಾಲದಲ್ಲಿ ಜೈನ ಧರ್ಮವು ಬೆಳೆಯಿತಾದರೂ, ಬೌದ್ಧ ಧರ್ಮವು ಅವನತಿಗೊಂಡಿತು. ಶಾತವಾಹನರು ಹಾಗೂ ಮೌರ್ಯರಂತೆ ಇವರು ಪ್ರಾಕೃತ ಭಾಷೆಯನ್ನು ಬಳಸದೆ, ಸಂಸ್ಕೃತವನ್ನು

ಉತ್ತೇಜಿಸಿದರು. ಸುಮಾರು ಐದನೆಯ ಶತಮಾನದ ಮಧ್ಯಭಾಗದ ವೇಳೆಗೆ, ಅಧಿಕೃತ ಭಾಷೆಯ ಸ್ಥಾನಕ್ಕೆ ಬಡ್ತಿ ಹೊಂದಿದ ಕನ್ನಡ ಭಾಷೆಯು, ಅದರ ಅಭಿವ್ಯಕ್ತತೆಯನ್ನು ಕಾಣತೊಡಗಿತು. ಕರ್ನಾಟಕದ ಅತ್ಯಂತ ಪುರಾತನ ಕನ್ನಡ ಶಾಸನ, ಅಂದರೆ ಹಲ್ಮಿಡಿ ಶಾಸನವು ಈ ಕಾಲಕ್ಕೆ ಸೇರಿದ್ದು. ಕನ್ನಡ ಭಾಷೆ ಕುರಿತಾದ ಸಾಮಾನ್ಯ ಅರಿವು ಬೆಳೆದು, ಕರ್ನಾಟಕದ ಜನರಲ್ಲಿ ಕನ್ನಡ ಸಂಸ್ಕೃತಿಯ ಸ್ಪಷ್ಟವಾದ ಅಭಿವ್ಯಕ್ತತೆಯು ರೂಪುಗೊಂಡಿತು.ಹಾಗಾಗಿ, ಕ್ರಿ.ಪೂ.ಮೂರನೆಯ ಶತಮಾನ ಹಾಗೂ ಕ್ರಿ.ಶ.ಆರನೆಯ ಶತಮಾನಗಳ ನಡುವಿನ ಅವಧಿಯಲ್ಲಿ, ಕರ್ನಾಟಕದ ಅನನ್ಯತೆಯ ಅಭಿವೃದ್ಧಿಗೆ ಬುನಾದಿ ಹಾಕಲಾಯಿತು. ಈ ಕಾರಣದಿಂದಾಗಿ ಕರ್ನಾಟಕದ ಚರಿತ್ರೆಯಲ್ಲಿ ಇದನ್ನು ಪ್ರಾರಂಭಿಕ ಅವಧಿಯೆಂದು ಗುರುತಿಸಲಾಗಿದೆ.

## ಮೌರ್ಯರು

ಕರ್ನಾಟಕವು ಸುಮಾರು ಕ್ರಿ.ಪೂ.ನಾಲ್ಕನೆಯ ಹಾಗೂ ಮೂರನೆಯ ಶತಮಾನಗಳಲ್ಲಿ ಉತ್ತರ ಭಾರತ ಮೂಲದ ನಂದರ ಆಳ್ವಿಕೆಯ ಬಲಿಷ್ಠ ಮಗಧ ಸಾಮ್ರಾಜ್ಯದ ಭಾಗವಾದ ಅವಧಿಗೆ, ಅದರ ಅತ್ಯಂತ ಪುರಾತನ ದಾಖಲಿತ ಚರಿತ್ರೆಯನ್ನು ಗುರುತಿಸಬಹುದು.ಅನೇಕ ಪುರಾಣಗಳಲ್ಲಿ, ಉತ್ತರ ಹಾಗೂ ದಕ್ಷಿಣ ಭಾರತಗಳೆರಡರಲ್ಲೂ ರಾರಾಜಿಸಿದ ಮಗಧ ಸಾಮ್ರಾಜ್ಯದ ಸಾರ್ವಭೌಮತ್ವದ ಉಲ್ಲೇಖಗಳಿವೆ.ಸರಿಸುಮಾರು ಕ್ರಿ.ಶ.೧,೫೦೦ಕ್ಕೆ ಸೇರಿದ ಸಿಂಗಿರಾಜ ಪುರಾಣವೆಂಬ ಕನ್ನಡದ ಕೃತಿಯಲ್ಲಿ, ಪಟ್ಟದಕಲ್ಲಿನ ವಿವರಣೆ ನೀಡುವಾಗ, ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ನಂದರನ್ನು ಹೆಸರಿಸಲಾಗಿದೆ. ಕನ್ನಡ ಹಾಗೂ ಸಂಗಮ ಸಾಹಿತ್ಯದ (ತಮಿಳು) ಕೆಲವು ಶಾಸನ ಹಾಗೂ ಸಾಹಿತ್ಯಕ ಕೃತಿಗಳಲ್ಲೂ, ಕುಂತಳದಲ್ಲಿನ (ಕರ್ನಾಟಕ) ನಂದರ ಆಳ್ವಿಕೆಯ ಉಲ್ಲೇಖ ಮಾಡಲಾಗಿದೆ.ನಂತರ, ಬೇರೆ ರಾಜ್ಯಗಳಂತೆ, ನಂದರ ನಂತರ ಬಂದ ಮೌರ್ಯರೂ ಸಹ ಕರ್ನಾಟಕವನ್ನು ಆಳಿದರು. ಅಶೋಕನ ಹಲವಾರು ಧರ್ಮಶಾಸನಗಳು ಹಾಗೂ ಇತರ ಪುರಾತತ್ವ ಪಳೆಯುಳಿಕೆಗಳು ಕರ್ನಾಟಕದಲ್ಲಿ ದೊರೆತಿವೆ. 'ಮೋರೆರ್–ಮನೆ' ಎಂದು ಕರೆಯಲ್ಪಡುವ ಕಲ್ಲುಗೋರಿಗಳ ಅಸ್ತಿತ್ವವು ಮೌರ್ಯರು ಕರ್ನಾಟಕದಲ್ಲಿ ಇದ್ದರೆನ್ನುವುದಕ್ಕೆ ನಿದರ್ಶನ. ಮಸ್ಕಿ (ರಾಯಚೂರು ಜಿಲ್ಲೆ), ಕೊಪ್ಪಳ (ಕೊಪ್ಪಳ ಜಿಲ್ಲೆ), ಸನ್ನತಿ (ಗುಲ್ಬರ್ಗಾ ಜಿಲ್ಲೆ), ನಿಟ್ಟೂರು ಹಾಗೂ ಉದ್‌ಗೋಲಮ್ (ಬಳ್ಳಾರಿ ಜಿಲ್ಲೆ), ಸಿದ್ದಾಪುರ, ಜಟ್ಟಿಂಗರಾಮೇಶ್ವರ ಹಾಗೂ ಬ್ರಹ್ಮಗಿರಿಗಳಲ್ಲಿ (ಚಿತ್ರದುರ್ಗ ಜಿಲ್ಲೆ) ದೊರೆತ ಅಶೋಕನ ಶಿಲಾಶಾಸನಗಳು ಕರ್ನಾಟಕದ ಉತ್ತರ ಭಾಗಗಳಲ್ಲಿ ಮೌರ್ಯರ ಇರುವಿಕೆಯನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ, ಮಸ್ಕಿ, ನಿಟ್ಟೂರು ಹಾಗೂ ಉದೆಗೋಲಂಗಳಲ್ಲಿ ದೊರೆತ ಶಾಸನಗಳಲ್ಲಿ ಅಶೋಕನನ್ನು ಆತನ ಹೆಸರಿನಿಂದ ಉಲ್ಲೇಖಿಸಲಾಗಿದೆ. ಬ್ರಾಹ್ಮೀ ಲಿಪಿ ಹಾಗೂ ಪ್ರಾಕೃತ ಭಾಷೆಯಲ್ಲಿ ಬರೆದ ಈ ಶಾಸನಗಳು, ಕರ್ನಾಟಕದಲ್ಲಿ ಸಾಕ್ಷರತೆಯ ಹರಡುವಿಕೆಗೆ ಪ್ರಾರಂಭಿಕ ಸಾಕ್ಷಿಯಾಗಿದೆ. 'ಭಿಕ್ಷುವಿನ ಭಕ್ತಿಶ್ರದ್ಧೆಗಳೊಂದಿಗೆ ರಾಜನ ಜ್ಞಾನ'ವನ್ನು ಹೊಂದಿದಂತೆ ಸಾಮ್ರಾಟ್ ಅಶೋಕನನ್ನು ಚಿತ್ರಿಸಿದ್ದಾರೆ. ಈ ಶಾಸನಗಳಲ್ಲಿ, ನಾಗರಿಕ ಜೀವನದ ಅಡಿಪಾಯವಾದ, ಧರ್ಮದ ಮಾರ್ಗವನ್ನು ಅಳವಡಿಸಿಕೊಳ್ಳುವಂತೆ ಜನರನ್ನು ಯಾಚಿಸುವ ಮೂಲಕ, ಅವರನ್ನು ವಿಶೇಷವಾಗಿ ಈ ಶಾಸನಗಳು ಉದ್ದೇಶಿಸುತ್ತವೆ. ಆತನ ರಾಜಶಾಸನಗಳ ಮೂಲಕ, ಎಲ್ಲ ವರ್ಗದ ಜನರೂ ಸರಿಯಾದ ಮಾರ್ಗದಲಿ ಜಿವನ ನಡೆಸುವ ಸಂದೇಶವನ್ನು ಸಾರಲು ಅಶೋಕನು ಹೊರಟನು. ಸದಾಚಾರನಿಷ್ಠತೆ ಹಾಗೂ ಧರ್ಮಪರತೆಯ ಸಂದೇಶ ಹರಡಲು ಭಾರತದ ವಿವಿಧ ಭಾಗ ಹಾಗೂ ನೆರೆಯ ದೇಶಗಳಿಗೆ ತನ್ನ ದೂತರನ್ನು ಕಳುಹಿಸಿದನು.

**ಅಶೋಕನ ಮಸ್ಕ ಶಾಸನ, ರಾಯಚೂರು ಜಿಲ್ಲೆ**



ಗೌತಮ ಬುದ್ಧನ ಕಟ್ಟಾ ಹಿಂಬಾಲಕನಾಗಿ, ಅಶೋಕನು ಧರ್ಮಪ್ರಚಾರಕ ಹುಮ್ಮಸ್ಸಿನೊಂದಿಗೆ ಬೌದ್ಧ ಧರ್ಮವನ್ನೂ ಹರಡಿದನು. ಅಷ್ಟೇ ಅಲ್ಲ, ಕರ್ನಾಟಕದಲ್ಲಿ ಬೌದ್ಧ ಧರ್ಮವು ಪ್ರಪ್ರಥಮ ಬಾರಿಗೆ ಪದಾರ್ಪಣೆ ಮಾಡಿದ್ದು ಅಶೋಕನ ಕಾಲದಲ್ಲೇ ಎಂದು ಹೇಳಲಾಗುತ್ತದೆ. ಸಾಹಿತ್ಯಕ ಹಾಗೂ ಶಾಸನೀಯ ಉಲ್ಲೇಖಗಳು, ಕರ್ನಾಟಕದಲ್ಲೂ ಬೌದ್ಧ ಧರ್ಮವನ್ನು ಹರಡಲು ಅಶೋಕನು ಗಂಭೀರವಾದ ಯತ್ನಗಳನ್ನು ಮಾಡಿದನು ಎಂಬುದಾಗಿ ತಿಳಿಸುತ್ತವೆ.ಮಹಾವಂಶ ಹಾಗೂ ದೀಪವಂಶದಂತಹ ಶ್ರೀಲಂಕಾದ ಬೌದ್ಧ ಗ್ರಂಥಗಳಲ್ಲಿ, ಕುಂತಳದಲ್ಲಿ (ಕರ್ನಾಟಕ) ಬೌದ್ಧ ಧರ್ಮವನ್ನು ಹರಡಲು ಅಶೋಕನು ಬೌದ್ಧ ಭಕ್ಷುಗಳನ್ನು ಕಳುಹಿಸಿದ ಉಲ್ಲೇಖಗಳಿವೆ. ಥೇರ ರಕ್ಷಿತ ಹಾಗೂ ಮಹಾದೇವರನ್ನು ಕ್ರಮವಾಗಿ ವನವಾಸಿಗೆ (ಬನವಾಸಿ, ಉತ್ತರ ಕನ್ನಡ ಜಿಲ್ಲೆ) ಹಾಗೂ ಮಹಿಷಮಂಡಲಕ್ಕೆ (ಮೈಸೂರು), ಬೌದ್ಧ ಧರ್ಮದ ತತ್ವಚಿಂತನೆಯ ಪ್ರಚಾರ ಮಾಡಲು ಕಳುಹಿಸಿದನೆಂದು ಹೇಳಲಾಗುತ್ತದೆ. ಬನವಾಸಿ ಹಾಗೂ ಮೈಸೂರು, ಬೌದ್ಧ ಮತದ ಪ್ರಮುಖ ಕೇಂದ್ರಗಳಾಗಿದ್ದವೆನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಅಶೋಕನ ಕಾಲಕ್ಕೆ ಸಂಬಂಧಿಸಿದ ಶಾಸನಾತ್ಮಕ ಹಾಗೂ ಸಾಹಿತ್ಯಕ ಉಲ್ಲೇಖಗಳು ಕರ್ನಾಟಕದ ಉತ್ತರದ ಭಾಗಗಳಲ್ಲಿ ಇದ್ದ ಮೌರ್ಯರ ಆಳ್ವಿಕೆಯನ್ನು ಸೂಚಿಸಿದರೆ, ಶ್ರವಣಬೆಳಗೊಳದ ಚಂದ್ರಗಿರಿಯಲ್ಲಿ ನೆಲೆಸಿದ ಚಂದ್ರಗುಪ್ತ ಮೌರ್ಯನನ್ನು ಕುರಿತಾದ ಸಾಂಪ್ರದಾಯಿಕ ವೃತ್ತಾಂತವು, ಕರ್ನಾಟಕದ ದಕ್ಷಿಣ ಭಾಗದಲ್ಲೂ ಮೌರ್ಯರ ಇರುವಿಕೆಯನ್ನು ಸೂಚಿಸುತ್ತದೆ.

ಜೈನ ಕಥೆಯ ಪ್ರಕಾರ, ಉತ್ತರ ಭಾರತದಲ್ಲಿ ೧೨ ವರ್ಷಗಳ ತೀವ್ರ ಬರವನ್ನು ಎದುರುನೋಡಿದ ಚಂದ್ರಗುಪ್ತನು, ಜೈನ ಗುರುವಾದ ಭದ್ರಬಾಹುವಿನೊಡನೆ ದಕ್ಷಿಣ ಭಾರತದತ್ತ ತೆರಳಿ, ಶ್ರವಣಬೆಳಗೊಳದಲ್ಲಿ ಬಂದು ನೆಲೆಸಿದನು. ಜೈನ ಮತದ ಆಚರಣೆಗೆ ಅನುಗುಣವಾಗಿ, ತನ್ನ ಕೊನೆಯ ದಿನಗಳಲ್ಲಿ ಚಂದ್ರಗುಪ್ತನು ಸಲ್ಲೇಖನವನ್ನು (ಆಮರಣಾಂತ ಉಪವಾಸ) ಕೈಗೊಂಡನು. ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದಲ್ಲಿರುವ ಭದ್ರಬಾಹುಗುಹೆ ಹಾಗೂ ಚಂದ್ರಗುಪ್ತ ಬಸದಿಗಳು

ಈ ಘಟನೆಯನ್ನು ನಮಗೆ ನೆನಪಿಸುತ್ತವೆ. ಶ್ರವಣಬೆಳಗೊಳ ಪ್ರದೇಶಕ್ಕೆ ಸೇರಿದ ಹಲವಾರು ಶಾಸನಗಳು ಹಾಗೂ ನಂತರದ ಅವಧಿಯ ಸಾಹಿತ್ಯಕ ಕೃತಿಗಳಲ್ಲಿ ಇದರ ಉಲ್ಲೇಖವಿದೆ.ತನ್ನ ಬೃಹತ್ಕಥಾಕೋಶದಲ್ಲಿ, ಹರಿಸೇನನು ಈ ಘಟನೆಯ ಉಲ್ಲೇಖವನ್ನು ಮಾಡಿದ್ದಾನೆ. ಚಂದ್ರಗುಪ್ತನ ಗುರುತಿಸುವಿಕೆಯ ಕುರಿತಾದ ಅಭಿಪ್ರಾಯದಲ್ಲಿ ವ್ಯತ್ಯಾಸಗಳಿದ್ದರೂ, ಕರ್ನಾಟಕದ ದಕ್ಷಿಣ ಭಾಗಗಳಲ್ಲಿ ಮೌರ್ಯರ ಇರುವಿಕೆಯನ್ನು ಖಚಿತಪಡಿಸುತ್ತವೆ.

ಯಾವುದೇ ಸ್ಪಷ್ಟವಾದ ಸಾಕ್ಷಿ ದೊರೆಯದ ಕಾರಣ, ಈ ಅವಧಿಯಲ್ಲಿ ಇದ್ದ ರಾಜಕೀಯ ಪರಿಸ್ಥಿತಿಗಳನ್ನು ಕುರಿತಾದ ಮಾಹಿತಿಯು ಅಷ್ಟಾಗಿ ದೊರೆತಿಲ್ಲ.ಆದರೆ, ಕುಮಾರ (ರಾಜಕುಮಾರ)ನೊಬ್ಬನ ಆಳ್ವಿಕೆಯಲ್ಲಿ, ಸುವರ್ಣಗಿರಿ ಅಥವಾ ಕನಕಗಿರಿಯು (ಮಸ್ಕಿ, ರಾಯಚೂರು ಜಿಲ್ಲೆ)ಅವರ ಪ್ರಾದೇಶಿಕ ರಾಜಧಾನಿಯಾಗಿದ್ದಂತೆ ತೋರುತ್ತದೆ.ಹಲವಾರು ಹುದ್ದೆಗಳಿಗೆ ಸೇರಿದ ಅಧಿಕಾರಿಗಳ ಮೂಲಕ, ಇಸಿಲಕ್ಕೆ (ಬ್ರಹ್ಮಗಿರಿ, ಚಿತ್ರದುರ್ಗ ಜಿಲ್ಲೆ) ಅಧಿಕೃತ ಆಣತಿಗಳನ್ನು ಕಳುಹಿಸಲಾಗುತ್ತಿತ್ತು. ಮಾಹಿತಿ ಇಲ್ಲದಿದ್ದರೂ, ಮೌರ್ಯ ಸಾಮ್ರಾಟನಾದ ಅಶೋಕನು ಸಾರಿದ ಬೌದ್ಧ ಸಿದ್ಧಾಂತ ಹಾಗೂ ಧರ್ಮವನ್ನು ರೂಢಿಸಿಕೊಳ್ಳಲು ಜನರಿಗೆ ಸಾಧ್ಯವಾದದ್ದು, ಈ ಪ್ರಾರಂಭಿಕ ಅವಧಿಯಲ್ಲಾಗಿದ್ದು, ಕರ್ನಾಟಕವು ಉನ್ನತ ಮಟ್ಟದ ಸಂಸ್ಕೃತಿಯನ್ನು ಪಡೆಯಲು ಪ್ರಾರಂಭವಾಗಿರುವುದನ್ನು ಇದು ಸೂಚಿಸುತ್ತದೆ.

ಅಶೋಕನ ಮರಣದ ನಂತರ, ಮೌರ್ಯ ಸಾಮ್ರಾಜ್ಯವನ್ನು ಬೇಧಿಸಿಕೊಂಡು ಹೊರಗೆ ಬಂದವರು ಡೆಕ್ಕನ್ ಪ್ರದೇಶದವರು. ಸ್ವಾರಸ್ಯವೆಂದರೆ, ಉತ್ತರ ಭಾರತದಲ್ಲಿ ಮೌರ್ಯ ಆಳ್ವಿಕೆಯು ಅಂತ್ಯವಾದ ಬಹಳ ಸಮಯದ ನಂತರವೂ, ಮೌರ್ಯ ರಾಜರು ಇಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರಿಸಿದರು. ಉತ್ತರ ಕರ್ನಾಟಕದ ಕೊಂಕಣ ಪ್ರದೇಶವು, ಬಹಳ ಅವಧಿಯವರೆಗೂ ಅವರ ಆಳ್ವಿಕೆಯಲ್ಲೇ ಮುಂದುವರೆದು, ಚಾಲುಕ್ಯ ರಾಜನಾದ ಇಮ್ಮಡಿ ಪುಲಕೇಶಿಯು ಅವರನ್ನು ಪದಚ್ಯುತಿಗೊಳಿಸುವವರೆಗೂ ಮುಂದುವರೆಯಿತು. ಸುಮಾರು ಕ್ರಿ.ಶ.ಒಂಬತ್ತನೆಯ ಶತಮಾನದವರೆಗೂ, ಮೌರ್ಯರು ಮಾಂಡಲಿಕರಾಗಿ ಕರ್ನಾಟಕದಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರಿಸಿದರು ಎಂದು ಹೇಳಲಾಗುತ್ತದೆ.

## ಸಾ (ಶಾ)ತವಾಹನರು


ಕ್ರಿ.ಪೂ ಎರಡನೆಯ ಶತಮಾನದಿಂದ ಕ್ರಿ.ಶ.ಎರಡನೆಯ ಶತಮಾನದವರೆಗೆ, ಸುಮಾರು ನಾಲ್ಕು ಶತಮಾನಗಳ ಕಾಲ, ಮೌರ್ಯರ ನಂತರದ ಡೆಕ್ಕನ್ ಪ್ರದೇಶದ ರಾಜಕೀಯ ವಿದ್ಯಮಾನಗಳ ಮೇಲೆ ಶಾತವಾಹನರು ಆವರಿಸಿದ್ದರು.ಈ ಅವಧಿಯ ಕರ್ನಾಟಕದ ಚರಿತ್ರೆಯಲ್ಲಿ ಅವರು ಪ್ರಮುಖವಾದ ಪಾತ್ರವನ್ನು ವಹಿಸಿದರು.ಚಂದ್ರವಳ್ಳಿ, ವಡಗಾಂವ್ ಮಾಧವಪುರ, ಬನವಾಸಿ, ಪಟ್ಟದಕಲ್ ಹಾಗೂ ಸನ್ನತಿಗಳಲ್ಲಿ ನಡೆದ ಉತ್ಖನನಗಳು ಹಾಗೂ ಇತರ ಸ್ಥಳಗಳಲ್ಲಿ ನಡೆದ ಶೋಧನೆಗಳು, ಕರ್ನಾಟಕದಲ್ಲಿ ಶಾತವಾಹನರ ಚರಿತ್ರೆ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಅಂಶಗಳನ್ನು ಎತ್ತಿಹಿಡಿದಿವೆ. ಬನವಾಸಿಯಲ್ಲಿ ನಡೆದ ಉತ್ಖನನಗಳು, ಶಾತವಾಹನರ ಕಾಲದ ವಸಾಹತುಗಳುಳ್ಳ ಎರಡು ಲಾಳಾಕಾರದ ಇಟ್ಟಿಗೆಯ ರಚನೆಗಳ ಜೊತೆಗೆ ಇತರ ಪ್ರಾಚೀನಾವಶೇಷಗಳು ಬೃಹತ್ ಪ್ರಮಾಣದಲ್ಲಿ ದೊರೆತಿವೆ. ಬೆಳಗಾವಿಯ ವಡಗಾಂವ್ ಮಾಧವಪುರದಲ್ಲಿದ್ದ ಇಡೀ ಶಾತವಾಹನ ವಸಾಹತು ಬೆಳಕಿಗೆ ಬಂದಿದೆ.ಅಲ್ಲದೆ, ಐಹೊಳೆ, ಪಟ್ಟದಕಲ್, ಹಂಪಿ, ಕುರುಗೋಡು, ವಾಸನ, ನರಗುಂದ ಹಾಗೂ ಇತರ ಸ್ಥಳಗಳಲ್ಲಿ ಶಾತವಾಹನ ಕಾಲದ ರಚನೆಗಳು ದೊರೆತಿವೆ.

ಶಾತವಾಹನರ ಅತ್ಯಂತ ಪ್ರಮುಖ ತಾಣವು ಸನ್ನತಿ (ಗುಲ್ಬರ್ಗಾ ಜಿಲ್ಲೆ) ಎಂದು ತೋರುತ್ತದೆ – ಇದು ಮೌರ್ಯರ ಕಾಲದಲ್ಲೂ ಮುಖ್ಯ ಕೇಂದ್ರವಾಗಿದ್ದ ಲಕ್ಷಣಗಳು ಕಂಡು ಬಂದಿವೆ. ಅಶೋಕನ ಶಿಲಾಶಾಸನಗಳು ಇಲ್ಲಿ ದೊರೆತಿವೆ, ಆದರೆ ಶಾತವಾಹನರ ಕಾಲದಲ್ಲಿ, ಇಟ್ಟಿಗೆ ಗೋಡೆಯ ಬತೇರಿಗಳನ್ನು ಹೊಂದಿದ್ದ ಮಹಾನಗರವಾಯಿತು. ಕ್ರಿ.ಶ.ಒಂದನೆಯ ಶತಮಾನದಿಂದ ಮೂರನೆಯ ಶತಮಾನಕ್ಕೆ ಸೇರಿದ ಕೋಟೆಗಳು, ವೃತ್ತಾಕಾರದ ಸ್ತೂಪಗಳು, ಬುದ್ಧನ ಜೀವನವನ್ನು ಪ್ರತಿನಿಧಿಸುವ ಆಯಕ ಕಂಭಗಳು, ಚಪ್ಪಡಿ ಕಲ್ಲುಗಳು ಹಾಗೂ ಹಲವಾರು ಶಾಸನಗಳು ಸನ್ನತಿಯಲ್ಲಿ ದೊರೆತಿವೆ. ಸ್ವಾರಸ್ಯಕರವೆಂದರೆ, ಸನ್ನತಿಯ ಭಾಗವಾದ ಹಾಗೂ ಇತ್ತೀಚಿನ ವರ್ಷಗಳಲ್ಲಿ ಉತ್ಖನನ ಗೊಂಡಿರುವ ಕನಗನಹಳ್ಳಿಯ ಸ್ತೂಪಗಳನ್ನು ಸುಂದರವಾಗಿ ಅಲಂಕಾರಗೊಂಡ, ಕೆತ್ತನೆ ಮಾಡಿದ ಸುಣ್ಣಕಲ್ಲಿನ ಆಧಾರಕಟ್ಟಿನ ಚಪ್ಪಡಿಗಳು ದೊರೆತಿದ್ದು, ಶಾತವಾಹನರ ಕಾಲದಲ್ಲಿ, ಸುಮಾರು ಕ್ರಿ.ಶ.ಎರಡನೆಯ ಶತಮಾನದಲ್ಲಿ ರಚಿಸಿದ ಅಶೋಕನ ಉಬ್ಬುಶಿಲ್ಪ ಕೆತ್ತನೆಯೂ ದೊರೆತಿದೆ.


ವಾಸಿಷ್ಠಪುತ್ರ ಸಿರಿ ಸಾತಕಾರ್ಣಿಯ ನಾಣ್ಯಗಳು


ನಾಗಶಿಲ್ಪ, ಬನವಾಸಿ, ಉತ್ತರ ಕನ್ನಡ

ಶಾತವಾಹನರ ಪ್ರಮುಖ ಅರಸನಾದ ಗೌತಮಿ ಪುತ್ರನು (ಕ್ರಿ.ಶ.೭೮–೧೦೨) ತನ್ನ ಸಾಮ್ರಾಜ್ಯವನ್ನು ಪಶ್ಚಿಮ ಡೆಕ್ಕನ್, ಕೊಂಕಣ, ಮುಂಬೈ, ಉತ್ತರ–ಡಕ್ಕನ್, ಮಾಳ್ವ, ಗುಜರಾತ್, ಮಧ್ಯಭಾರತ ಹಾಗೂ ಬಿಹಾರ ಪ್ರಾಂತ್ಯಗಳಿಗೆ ವಿಸ್ತರಿಸಿದ್ದನು. ಕುಂತಳೇಶ್ವರ ಎಂಬ ಇವನ ಬಿರುದು ಕುಂತಳನಾಡಿನೊಂದಿಗೆ ಅವನಿಗಿದ್ದ ಸಂಬಂಧವನ್ನು ಸೂಚಿಸುತ್ತದೆ. ಸುಮಾರು ಒಂಬತ್ತನೆಯ ಶತಮಾನಕ್ಕೆ ಸೇರಿದ ಕವಿ ರಾಜಶೇಖರನು ತನ್ನ “ಕಾವ್ಯ ಮೀಮಾಂಸೆ” ಕೃತಿಯಲ್ಲಿ “ಕುಂತಳಾಧೀಶ್ವರ” ಎಂದು ಉಲ್ಲೇಖಿಸಿದ್ದು, ಇದು ಕರ್ನಾಟಕದ ಮೇಲೆ ಶಾತವಾಹನರು ಹೊಂದಿದ್ದ ನಿಯಂತ್ರಣವನ್ನು ಸೂಚಿಸುತ್ತದೆ. ಕವಿ ಹಾಲನಿಂದ ರಚಿತಗೊಂಡಿರುವ ಪ್ರಾಕೃತ ಗ್ರಂಥ “ಗಾಥಾ ಸಪ್ತಸತಿ”ಯು ಹಾಲನನ್ನು ಕುಂತಳಾಧೀಶನೆಂದು ಉಲ್ಲೇಖಿಸುತ್ತದೆ. ಈ ಸಾಹಿತ್ಯ ಗ್ರಂಥಗಳಲ್ಲದೆ ಈ ಕಾಲಕ್ಕೆ ಸೇರಿದ ಅನೇಕ ಶಾಸನಗಳು ಶಾತವಾಹನರು ಕರ್ನಾಟಕವನ್ನು ಆಳಿದ ಅಂಶವನ್ನು ತಿಳಿಸುತ್ತವೆ. ಕದಂಬರಾಜ ಶಾಂತಿವರ್ಮನ ಕ್ರಿ.ಶ ೪೫೦ರ ತಾಳಗುಂದ ಶಾಸನ ಅಲ್ಲಿಯ ಪ್ರಣವೇಶ್ವರ ಲಿಂಗವನ್ನು ಶಾತವಾಹನ ಅರಸರು ಆರಾಧಿಸುತ್ತಿದ್ದುದನ್ನು ತಿಳಿಸಿದರೆ, ಗೌತಮೀ ಪುತ್ರ ಸಾತಕರ್ಣಿಯ ನಾಸಿಕ ಶಿಲಾಶಾಸನ, ಮ್ಯಾಕ್‌ದೊನಿ ಶಾಸನ, ಹಾಗೂ ಹಿರೇಹಡಗಲಿ ತಾಮ್ರ ಫಲಕಗಳು ಬನವಾಸಿ ಪ್ರದೇಶವನ್ನು ಶಾತವಾಹನರು ಆಳುತಿದ್ದ ಅಂಶವನ್ನು ಖಚಿತಪಡಿಸುತ್ತವೆ. ಇವುಗಳಲ್ಲದೆ ಬನವಾಸಿ, ಚಿತ್ರದುರ್ಗ ಮುಂತಾದ ಸ್ಥಳಗಳಲ್ಲಿ ಈ ಕಾಲಕ್ಕೆ ಸೇರಿದ ನಾಣ್ಯಗಳು ಯಥೇಚ್ಛವಾಗಿ ಲಭಿಸಿದ್ದು ಶಾತವಾಹನರು ಕರ್ನಾಟಕದ ಮೇಲೆ ಹೊಂದಿದ್ದ ನಿಯಂತ್ರಣವನ್ನು ಪುಷ್ಟೀಕರಿಸುತ್ತದೆ.


*Asoka's sculpture, Kanaganahalli, Gulbarga District*

## ಚುಟು ಹಾಗೂ ಮಹಾರಥಿ ರಾಜವಂಶಗಳು

ಚುಟು ಹಾಗೂ ಮಹಾರಥಿ ಅರಸು ಮನೆತನಗಳು ಶಾತವಾಹನರ ಸಮಕಾಲೀನರಷ್ಟೇ ಆಗಿರದೆ, ಅವರ ಸಾಮಂತರಾಗಿಯೂ ಆಡಳಿತ ನಡೆಸಿದ್ದಾರೆ. ಮಹಾರಥಿಗಳು ಚಿತ್ರದುರ್ಗ, ಕಾರವಾರ ಮತ್ತು ಬನವಾಸಿ ಪ್ರದೇಶವನ್ನು ಭಾಗಶಃ ಆಳಿದ್ದು “ಸಡಕನ” ಅವರ ಕುಲನಾಮವಾಗಿದೆ. ಈ ಮನೆತನಕ್ಕೆ ಸೇರಿದ ಸಡಕನ ಕಲಲಾಯ ಮಹಾರಥಿ, ಸಡಕನ ಕನ್ಹ ಮಹಾರಥಿ ಪುತ, ಸಡಕನ ಚುಟುಕನ ಮಹಾರಥಿ ಹಾಗೂ ಮತ್ತೊಬ್ಬ ಅನಾಮಧೇಯ ಮಹಾರಥಿ ಸೇರಿದಂತೆ ಒಟ್ಟು ನಾಲ್ಕು ತಲೆಮಾರಿನ ಅರಸರು ರಾಜ್ಯವಾಳಿದರು. ಮಹಾರಥಿ ನಾಣ್ಯಗಳು ಚಂದ್ರವಳ್ಳಿ, ಚಿತ್ರದುರ್ಗ, ಬನವಾಸಿ, ಐಹೊಳೆ ಮುಂತಾದೆಡೆಗಳಲ್ಲಿ ದೊರೆತಿದ್ದು, ಅವು ಶಾತವಾಹನರ ನಾಣ್ಯಗಳನ್ನೇ ಸರಿಸುಮಾರು ಹೋಲುತ್ತವೆ. ಸೀಸದಿಂದ ಮಾಡಲ್ಪಟ್ಟ ಈ ನಾಣ್ಯಗಳ ಮುಮ್ಮುಖದಲ್ಲಿ ಗೂಳಿ, ಹಾಗೂ ಬ್ರಾಹ್ಮೀಲಿಪಿಯಲ್ಲಿ ಆಳರಸರ ಹೆಸರು, ಹಿಮ್ಮುಖದಲ್ಲಿ ಚೈತ್ಯ ಹಾಗೂ ಭೋಧಿವೃಕ್ಷಗಳನ್ನೊಳಗೊಂಡ ಕಟಾಂಜನವನ್ನು ಕಾಣಬಹುದಾಗಿದೆ.

ಶಾತವಾಹನರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದ ರಾಜಮನೆತನ ಚುಟುಗಳದ್ದು. ಮೂರನೇ ಶತಮಾನದಲ್ಲಿ ಆಳಿದ್ದ ಇವರು ಶಾತವಾಹನರಿಗೆ ಸಾಮಂತರೂ ಆಗಿದ್ದು, ಇವರ ಎರಡು ಶಾಸನಗಳು ಮಳವಳ್ಳಿ (ಶಿವಮೊಗ್ಗ ಜಿಲ್ಲೆ) ಹಾಗೂ ಬನವಾಸಿ (ಉತ್ತರ ಕನ್ನಡ ಜಿಲ್ಲೆ) ಯಲ್ಲಿ ದೊರೆತಿದೆ.

ಮೌರ್ಯೋತ್ತರ ಕರ್ನಾಟಕದ ಇತಿಹಾಸದಲ್ಲಿ ಶಾತವಾಹನರ ಆಳ್ವಿಕೆಯನ್ನು ಸ್ಪಷ್ಟವಾಗಿ ನಿರೂಪಿಸುವಲ್ಲಿ ಶಾತವಾಹನರ ಕಾಲದ ಜನವಸತಿಗಳ ಭೌಗೋಳಿಕ ವಿತರಣೆಯು ನೆರವಾಗುತ್ತದೆ. ಕರಾವಳಿ ಕರ್ನಾಟಕ ಭಾಗದಲ್ಲಿದ್ದ ಬಂದರುಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ ನೆರೆಹೊರೆಯ ದೇಶಗಳೊಂದಿಗೆ ಉತ್ತಮ ವಾಣಿಜ್ಯ ಸಂಬಂಧವನ್ನು ಇವರು ಸ್ಥಾಪಿಸಿದ್ದರು. ಅಲ್ಲದೆ ವಾಣಿಜ್ಯ ವ್ಯವಹಾರಗಳನ್ನು ಅಭಿವೃದ್ಧಿಪಡಿಸಲು ಅನೇಕ ಪಟ್ಟಣ ಹಾಗೂ ನಗರಗಳನ್ನು ಹುಟ್ಟುಹಾಕಿದರು. ಮಿಗಿಲಾಗಿ ವಾಣಿಜ್ಯ ಹಾಗೂ ವ್ಯಾಪಾರದ ಬೆಳವಣಿಗೆಗಾಗಿ ವರ್ತಕ ಸಂಘ (ನಿಗಮ)ಗಳು ರಚನೆಗೊಂಡವು.

ಕರ್ನಾಟಕದ ವಿವಿಧ ಭಾಗಗಳಲ್ಲಿ ಪತ್ತೆಯಾಗಿರುವ ರೋಮನ್ ಅರಸರಾದ ಆಗಸ್ಟಸ್ ಹಾಗೂ ಟೈಬೀರಿಯಸ್‌ರ ಕಾಲದ ರೋಮನ್ ನಾಣ್ಯಗಳು ಆ ಕಾಲದ ಸಮೃದ್ಧ ಸಾಗರೋತ್ತರ ವ್ಯಾಪಾರಕ್ಕೆ ಕೈಗನ್ನಡಿಯಾಗಿವೆ. ಸ್ಥಳೀಯ ಆಡಳಿತ ಸಂಸ್ಥೆಗಳ ನೈತಿಕ ಮೌಲ್ಯಾಧಾರಿತ ಆರೋಗ್ಯಯುಕ್ತ ಆಡಳಿತವೂ, ಸಾರ್ವತ್ರಿಕ ಆಡಳಿತದಲ್ಲಿ ಸ್ಥಿರತೆ ಹಾಗೂ ದಕ್ಷತೆಯನ್ನು ತರುವಲ್ಲಿ ನೆರವಾಗಿತ್ತು. ಇದು ರಾಜನ ಜವಾಬ್ದಾರಿಯನ್ನು ಕೇವಲ ಮೇಲುಸ್ತುವಾರಿಗಷ್ಟೇ ಸೀಮಿತಗೊಳಿಸಿತ್ತು. ಸಮಾಜದ ಎಲ್ಲಾ ಸ್ತರಗಳಲ್ಲೂ ಧರ್ಮ ಪ್ರಧಾನವಾಗಿದ್ದು, ಪ್ರಜಾ ಕಲ್ಯಾಣಕ್ಕಾಗಿ ರೂಪಿಸಲ್ಪಟ್ಟ ನೀತಿ ನಿಯಮಗಳನ್ನು ಆಳರಸನೂ ಮೀರಲು ಅವಕಾಶವಿರಲಿಲ್ಲ. ಹೀಗೆ ಆಡಳಿತದ ಸ್ಥಿರತೆಗೆ ಹಾಗೂ ವಾಣಿಜ್ಯ ವ್ಯಾಪಾರಗಳಿಗೆ ಶಾತವಾಹನ ಅರಸರು ನೀಡಿದ ಪ್ರೋತ್ಸಾಹದಿಂದಾಗಿ, ರಾಜ್ಯದಲ್ಲಿ ಶಾಂತಿ ಹಾಗೂ ಸುಭಿಕ್ಷೆ ಸ್ಥಾಪಿತಗೊಳ್ಳಲು ಸಾಧ್ಯವಾಯಿತು.

ಬೌದ್ಧ ಧರ್ಮದ ಅಭಿವೃದ್ಧಿಗೆ ಶಾತವಾಹನರು ಪ್ರೋತ್ಸಾಹ ನೀಡಿದ್ದು, ಇದನ್ನು ಸನ್ನತಿ, ಬನವಾಸಿ ಮುಂತಾದೆಡೆ ಇರುವ ಸ್ತೂಪ, ವಿಹಾರ ಮುಂತಾದ ಸ್ಮಾರಕಗಳು ಖಚಿತಪಡಿಸುತ್ತವೆ. ಶಾತವಾಹನರ ಆಡಳಿತಾವಧಿಯಲ್ಲಿ ಕಲೆ ಹಾಗೂ ವಾಸ್ತುಶಿಲ್ಪಗಳಿಗೆ ದೊರೆತ ರಾಜಾಶ್ರಯವನ್ನು ಈ ಸ್ಮಾರಕಗಳು ಪ್ರತಿಬಿಂಬಿಸುತ್ತವೆ.

## ಕದಂಬರು

ಕರ್ನಾಟಕವನ್ನಾಳಿದ ಮೊಟ್ಟ ಮೊದಲ ಸ್ಥಳೀಯ ಮನೆತನ ಎಂಬ ಹೆಗ್ಗಳಿಕೆ ಕದಂಬರಿಗೆ ಸಲ್ಲುತ್ತದೆ. ಕರ್ನಾಟಕದ ಗಡಿಯಾಚೆ ತಮ್ಮ ರಾಜಧಾನಿಗಳನ್ನು ಹೊಂದಿದ್ದ ಹೊರಗಿನವರಾದ ನಂದ, ಮೌರ್ಯ ಹಾಗೂ ಶಾತವಾಹನ ರಾಜಮನೆತನಗಳಾದರೆ ಇವರು ತಮ್ಮ ರಾಜಧಾನಿ ಪಟ್ಟಣಗಳನ್ನು ಕರ್ನಾಟಕದ ಗಡಿಯೊಳಗೆ ಹೊಂದಿದ್ದು ಉಲ್ಲೇಖಾರ್ಹವಾಗಿದೆ. ಕ್ರಿ.ಶ ನಾಲ್ಕರಿಂದ ಏಳನೆಯ ಶತಮಾನದವರೆಗೆ, ಶಿವಮೊಗ್ಗ, ಉತ್ತರಕನ್ನಡ, ಧಾರವಾಡ, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನೊಳಗೊಂಡ ಕರ್ನಾಟಕದ ಉತ್ತರ ಭಾಗವನ್ನೊಳಗೊಂಡ ವಿಶಾಲ ಸಾಮ್ರಾಜ್ಯವನ್ನು ಆಳಿದರು. ಆನಂತರದಲ್ಲಿ ಸುಮಾರು ೧೦–೧೨ನೇ ಶತಮಾನದ ಅವಧಿಯಲ್ಲಿ ಈ ವಂಶಸ್ಥರು ಹಾನಗಲ್, ಗೋವಾ ಪ್ರಾಂತಗಳಲ್ಲಿ ಕಲ್ಯಾಣದ ಚಾಳುಕ್ಯರ ಸಾಮಂತರಸರಾಗಿ ಆಡಳಿತ ನಡೆಸಿದರು.

ಈ ಮನೆತನದ ಮೊದಲ ಅರಸನಾದ ಮಯೂರವರ್ಮನು ಕದಂಬ ಮನೆತನದ ಮೂಲ ಸ್ಥಾಪಕನಾದ ತ್ರಿಲೋಚನ ಅಥವಾ ಮುಕ್ಕಣ್ಣ ಕದಂಬನ ಮಗನಾಗಿದ್ದು ಮಯೂರನಿಗೆ ಸಂಬಂಧಿಸಿದಂತೆ ಕುತೂಹಲಕಾರಿ ಕಥೆಯೊಂದಿದೆ. ಆ ಪ್ರಕಾರ, ಮೂಲತ: ಬ್ರಾಹ್ಮಣನಾದ ಮಯೂರನು ಕ್ಷಾತ್ರ ಧರ್ಮವನ್ನು ಸ್ವೀಕರಿಸಿ, ಪಲ್ಲವರನ್ನು ವಿರೋಧಿಸಿ, ಬಲಿಷ್ಠ ರಾಜ್ಯವನ್ನು ಸ್ಥಾಪಿಸಲು ಮುಂದಾದನೆಂಬುದೇ ಆ ಕಥೆಯ ಸಾರವಾಗಿದೆ. ಸುಮಾರು ಐದನೆಯ ಶತಮಾನಕ್ಕೆ ಸೇರಿದ ತಾಳಗುಂದ (ಶಿಕಾರಿಪುರ ತಾ ಶಿವಮೊಗ್ಗ ಜಿಲ್ಲೆ) ಶಿಲಾಶಾಸನದಲ್ಲಿ ದಾಖಲಾಗಿರುವಂತೆ,


ಪ್ರಣೇಶ್ವರ ದೇವಾಲಯ, ತಾಳಗುಂದ, ಶಿವಮೊಗ್ಗ ಜಿಲ್ಲೆ

ಬ್ರಾಹ್ಮಣ ಕುಟುಂಬವೊಂದರ ಮನೆಯ ಮುಂದೆ ಕದಂಬ ವೃಕ್ಷವಿದ್ದುದರಿಂದ, ಆ ಮನೆತನಕ್ಕೆ 'ಕದಂಬ' ಎಂಬ ಹೆಸರು ರೂಢಿಗೆ ಬಂದು, ಮುಂದೆ ಅದೇ ಈ ಮನೆತನದ ಹೆಸರಾಯಿತು. ಈ ಮನೆತನಕ್ಕೆ ಸೇರಿದ ಮಯೂರವರ್ಮನು ಉನ್ನತ ವ್ಯಾಸಾಂಗಕ್ಕಾಗಿ ಆ ಕಾಲದಲ್ಲಿ ವಿದ್ವತ್‌ಪೂರ್ಣ ವ್ಯಾಸಂಗಕ್ಕೆ ಘಟಿಕಾಸ್ಥಾನ ಎಂದು ಖ್ಯಾತಿಗಳಿಸಿದ್ದ ಪಲ್ಲವ ರಾಜಧಾನಿ ಕಂಚಿಪುರಕ್ಕೆ ತೆರಳಿದನು. ಕಂಚಿಯಲ್ಲಿದ್ದ ಸಮಯದಲ್ಲಿ ಪಲ್ಲವ ರಾಜಕುಮಾರನೊಂದಿಗೆ ಘರ್ಷಣೆಗಿಳಿದು ಅವಮಾನಿತಗೊಂಡು ಬ್ರಾಹ್ಮಣತ್ವವನ್ನು ತ್ಯಜಿಸಿ ಕ್ಷಾತ್ರವೃತ್ತಿಯನ್ನು ಸ್ವೀಕರಿಸಿ ಖಡ್ಗಧಾರಿಯಾದ ಮಯೂರನು ಕಂಚಿಯನ್ನು ತ್ಯಜಿಸಿ, ದಟ್ಟಡವಿಯಿಂದ ಕೂಡಿದ ಶ್ರೀಪರ್ವತವನ್ನು ತಲುಪಿ ಯುವಕರಿಂದ ಕೂಡಿದ ಸೇನಾಪಡೆಯನ್ನು ಸಂಘಟಿಸಿ, ಪಲ್ಲವರನ್ನು ಎದುರಿಸಿದನು. ಮಯೂರನು ಸಾಮರ್ಥ್ಯವನ್ನು ಮನಗಂಡ ಪಲ್ಲವರು ಪಶ್ಚಿಮ ಸಮುದ್ರದಿಂದ ಪ್ರೇಹಾರ ನದಿಯವರೆಗಿನ ಭಾಗಶಃ (ಕರ್ನಾಟಕದ ಈಶಾನ್ಯ ಭಾಗ) ವಿಶಾಲ ಪ್ರದೇಶವನ್ನು ಮಯೂರನಿಗೆ ನೀಡಿ ಅವನ ರಾಜತ್ವವನ್ನು ಘೋಷಿಸಿದರು. ಬ್ರಾಹ್ಮಣ್ಯ ತ್ಯಜಿಸಿ ಕ್ಷತ್ರಿಯನಾಗುತ್ತಿದ್ದಂತೆ, ಮಯೂರಶರ್ಮನಾಗಿದ್ದ ಇವನು ಮಯೂರವರ್ಮನಾದನೆಂಬ ಅಭಿಪ್ರಾಯವಿದೆ. ಆದರೆ ಇತ್ತೀಚೆಗೆ ವಿದ್ವಾಂಸರು ಮಯೂರನ ಬ್ರಾಹ್ಮಣ ಮೂಲವನ್ನು ಅನುಮಾನಿಸುತ್ತಿದ್ದಾರೆ.

ಬನವಾಸಿಯಿಂದ ಆಳುತ್ತಿದ್ದ ಕದಂಬರು (ಸಿರ್ಸಿ ತಾ) ಮಾನವ್ಯ ಗೋತ್ರಿಯರಾಗಿದ್ದು, ಹಾರೀತಿ ಪುತ್ರರೆಂದು ತಮ್ಮನ್ನು ಕರೆದುಕೊಂಡಿದ್ದಾರೆ. 'ಧರ್ಮಮಹಾರಾಜ' ಎಂಬ ಬಿರುದನ್ನು ಧರಿಸಿದ್ದ ಕದಂಬರು ಧರ್ಮಾನುಸಾರ ರಾಜ್ಯಭಾರ ನಡೆಸಿದರು. 'ಸಿಂಹ' ಅವರ ರಾಜಲಾಂಛನವಾಗಿದ್ದು, ವಾನರ ಧ್ವಜಿಗಳಾಗಿದ್ದರು. ಉಚ್ಚಂಗಿದುರ್ಗ (ಹರಪನಹಳ್ಳಿ ತಾಲೂಕು, ದಾವಣಗೆರೆ ಜಿಲ್ಲೆ) ಹಾಗೂ ಹಲಸಿ (ಖಾನಾಪುರ ತಾ ಬೆಳಗಾವಿ ಜಿಲ್ಲೆ) ಅವರ ಉಪರಾಜಧಾನಿಗಳಾಗಿದ್ದವು. ಬನವಾಸಿಗೆ ಅನತಿ ದೂರದಲ್ಲಿರುವ ಗುಡ್ನಾಪುರದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಉತ್ಖನನಗಳಿಂದಾಗಿ, ಕದಂಬರ ಕಾಲದ ಅರಮನೆ, ರಾಣಿವಾಸ, ಜಿನಾಲಯಗಳೇ ಮುಂತಾದ ಕಟ್ಟಡಗಳ ಅವಶೇಷಗಳು ಬೆಳಕಿಗೆ ಬಂದಿವೆ.

ಈ ಮನೆತನದ ಮೊದಲನೆಯ ಅರಸನಾದ ಮಯೂರನು ತನ್ನ ರಾಜ್ಯವನ್ನು ವಿಸ್ತರಿಸಿ, ಅಶ್ವಮೇಧಯಾಗವನ್ನು ಕೈಗೊಂಡನು. ಇವನ ಮೊಮ್ಮಗನಾದ ಕಾಕುಸ್ಥವರ್ಮನು ವೀರತ್ವದಲ್ಲಿ, ರಾಜನೀತಿಯಲ್ಲಿ ಮಯೂರನನ್ನೇ ಹೋಲುತ್ತಿದ್ದನು. ತಾಳಗುಂದ, ಬನವಾಸಿ, ಗುಡ್ನಾಪುರ, ಚಂದ್ರವಳ್ಳಿ, ಮುಂತಾದೆಡೆ ದೊರೆತಿರುವ ಶಿಲಾಶಾಸನ ಹಾಗೂ ತಾಮ್ರಫಲಕಗಳು ಕದಂಬರು ಸಂಸ್ಕೃತ ಭಾಷೆಗೆ ರಾಜಮನ್ನಣೆ ನೀಡುವ ಮೂಲಕ ಅದರ ಪೋಷಣೆಗೆ ನೆರವಾದ ಅಂಶವನ್ನು ಖಚಿತಪಡಿಸುತ್ತವೆ. ಇವರ ಸಂಸ್ಕೃತಿ ಶಾಸನಗಳಲ್ಲಿ ಹೆಚ್ಚಿನವು ಉತ್ಕೃಷ್ಟವಾದ ಕಾವ್ಯಮಯ ಶೈಲಿಯಲ್ಲಿ ರಚಿತಗೊಂಡಿರುವುದನ್ನು ಕಾಣಬಹುದಾಗಿದೆ. ಅದರಲ್ಲೂ ಕುಬ್ಜನಿಂದ ರಚಿಸಲ್ಪಟ್ಟಿರುವ ತಾಳಗುಂದ ಶಿಲಾಶಾಸನವು ಉತ್ಕೃಷ್ಟ ಗುಣಮಟ್ಟದ ಸಾಹಿತ್ಯ ಸಂರಚನೆಯಾಗಿದೆ ಅವರು ಕಲೆ ಹಾಗೂ ವಾಸ್ತು ಶಿಲ್ಪಗಳಿಗೂ ಅಷ್ಟೇ ಪ್ರೋತ್ಸಾಹ ನೀಡಿದರು. ಬನವಾಸಿ, ತಾಳಗುಂದ, ಹಲಸಿ



***A collection of small stone statues at a temple at Vidurashwatha in Gauribidanur Taluk, Chikkaballapur District.***





ಮುಂತಾದೆಡೆಗಳಲ್ಲಿ ಆದಿ ಕದಂಬರ ಕಾಲದ ದೇವಾಲಯಗಳಿವೆ. ಆದರೆ ಇವುಗಳಲ್ಲಿ ಹೆಚ್ಚಿನವು ಶಿಥಿಲಗೊಂಡಿದ್ದು ಇಲ್ಲವೇ ನಂತರದ ಕಾಲದಲ್ಲಿ ಪುನರ್‌ಜ್ಜೀರ್ಣೋದ್ಧಾರಗೊಂಡಿದ್ದಾಗಿದೆ. ತಾಳಗುಂದದ ಪ್ರಣವೇಶ್ವರ ದೇವಾಲಯವನ್ನು ಕರ್ನಾಟಕದ ಅತ್ಯಂತ ಪ್ರಾಚೀನ ದೇವಾಲಯವೆಂದು ಪರಿಗಣಿಸಲಾಗಿದೆ. ಬನವಾಸಿಯ ಮಧುಕೇಶ್ವರ ಕದಂಬರ ಕುಲದೇವರಾಗಿದ್ದು ಇವರು ಎಲ್ಲಾ ಧರ್ಮಗಳಿಗೂ ಪ್ರೋತ್ಸಾಹ ನೀಡಿದ್ದು ಅದರಲ್ಲೂ ಜೈನ ಹಾಗೂ ಬ್ರಾಹ್ಮಣ ಧರ್ಮೀಯರಿಗೆ ಉದಾರ ದತ್ತಿಗಳನ್ನು ನೀಡಿದ್ದರು. ಸುಮಾರು ೧೭೫೦ ವರ್ಷಗಳ ಹಿಂದೆ ನಿರ್ಮಿಸಲ್ಪಟ್ಟಿರುವ ಗುಡ್ನಾಪುರ ಹಾಗೂ ಚಂದ್ರವಳ್ಳಿ ಕೆರೆಗಳು ಜಲತಂತ್ರಜ್ಞಾನ ಕಾಮಗಾರಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಲಭ್ಯವಿರುವ ಪುರಾತನ ಕೆರೆಗಳಾಗಿದ್ದು ಈಗಲೂ ಉಪಯೋಗಿಸಲ್ಪಡುತ್ತಿವೆ. ಎಲ್ಲಾ ವರ್ಗದ ಜನರಿಗೂ ಉಪಯುಕ್ತವಾದ ವಿಶ್ರಾಂತಿ ಗೃಹ, ಧರ್ಮಶಾಲೆ, ಅರವಟ್ಟಿಗೆ ಮುಂತಾದವನ್ನು ಇವರು ನಿರ್ಮಿಸಿದ್ದರು.

ಅರಸ ಒಂದನೆಯ ಕೀರ್ತಿವರ್ಮನು ಸುಮಾರು ಕ್ರಿ.ಶ ೫೬೫ರಲ್ಲಿ ಬನವಾಸಿಯನ್ನು ವಶಪಡಿಸಿಕೊಳ್ಳುವುದರೊಂದಿಗೆ, ಕದಂಬರ ಆಳ್ವಿಕೆಯು ಅಂತ್ಯಗೊಂಡಿತು. ಕಾಲಾನಂತರದಲ್ಲಿ ಕದಂಬ ಸಾಮ್ರಾಜ್ಯವು ಎರಡು ಶಾಖೆಗಳಾಗಿ ವಿಭಜಿಸಲ್ಪಟ್ಟಿತು. ಬಾದಾಮಿ ಚಾಲುಕ್ಯ ಇದೇ ವಂಶಸ್ಥರು ಆನಂತರದಲ್ಲಿ ಹಾನಗಲ್ ಹಾಗೂ ಗೋವಾ ಪ್ರಾಂತಗಳಲ್ಲಿ ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ಸೇವೆ ಸಲ್ಲಿಸಿದರು. ವಿಜಯನಗರ ಕಾಲದವರೆಗಿನ ಶಾಸನಗಳಲ್ಲಿ ಈ ಮನೆತನದ ಸಣ್ಣ ಪುಟ್ಟ ಸಾಮಂತರ ಉಲ್ಲೇಖ ನಿರಂತರವಾಗಿ ಲಭಿಸುತ್ತದೆ.

## ಗಂಗರು

ಕರ್ನಾಟಕದ ದಕ್ಷಿಣ ಭಾಗವನ್ನು ಕ್ರಿ.ಶ ನಾಲ್ಕನೆಯ ಶತಮಾನದಿಂದ ೧೦ನೇ ಶತಮಾನದವರೆಗೆ ಗಂಗರು ಆಳಿದರು. ಸಾಂಪ್ರದಾಯಕ ಹೇಳಿಕೆಯಂತೆ, ಸಿಂಹನಂದಿ ಎಂಬ ಜೈನ ಗುರುವಿನ ನೆರವಿನೊಂದಿಗೆ ದಡಿಗ–ಮಾಧವ ಸೋದರರು, ಗಂಗವಾಡಿ ೯೬೦೦೦ ಪ್ರಾಂತವನ್ನೊಳಗೊಂಡ ಗಂಗ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆರಂಭದಲ್ಲಿ ನಂದಗಿರಿ ಹಾಗೂ ಕುವಲಾಲಪುರಗಳು ಅವರ ರಾಜಧಾನಿಗಳಾಗಿದ್ದವು. ಕಾಲಾನಂತರದಲ್ಲಿ ಇವರು ತಮ್ಮ ರಾಜಧಾನಿಯನ್ನು ತಲಕಾಡು, ಹಾಗೂ ಮಣ್ಣೆಗೆ ಸ್ಥಳಾಂತರಿಸಿದರು.

ಸುಧೀರ್ಘಕಾಲ ರಾಜ್ಯಭಾರ ಮಾಡಿದ ಗಂಗರು ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದ್ದಾರೆ. 'ಧರ್ಮಮಹಾರಾಜ' ಎಂದು ತಮ್ಮನ್ನು ಕರೆದುಕೊಂಡಿದ್ದ ಇವರು ಮನು ಹಾಗೂ ಕೌಟಿಲ್ಯ ಪ್ರತಿಪಾದಿಸಿರುವ ಸಾಂಪ್ರದಾಯಕ ಮೌಲ್ಯಗಳನ್ನು ಆಧರಿಸಿದ ಆಡಳಿತವನ್ನು ನೀಡಿದ್ದರು. ಆಡಳಿತಯಂತ್ರದ ಕಾರ್ಯಕ್ಷಮತೆಗೆ ಪೂರಕವಾದ ಉತ್ತಮ ಕಂದಾಯ ವ್ಯವಸ್ಥೆ, ಸಮರ್ಥ ರಕ್ಷಣಾ ಹಾಗೂ ನ್ಯಾಯಾಂಗ ವಿಭಾಗಗಳನ್ನು ಹೊಂದಿದ್ದರೂ ಶೈವ, ವೈಷ್ಣವ ಹಾಗೂ ಜೈನಧರ್ಮಗಳಿಗೆ ಆಶ್ರಯ ನೀಡಿದ್ದ ಇವರು ಕನ್ನಡ ಹಾಗೂ ಸಂಸ್ಕೃತ ಭಾಷೆಗಳಿಗೆ ಸಮಾನ ಪ್ರೋತ್ಸಾಹ ನೀಡಿದ್ದರು. ಈ ಮನೆತನದ ಆಳ್ವಿಕೆಯು ದುರ್ವಿನಿತ, ಶ್ರೀಪುರುಷ, ಮಾರಸಿಂಹ ಮುಂತಾದ ಸಮರ್ಥ ಅರಸರ ಸರಮಾಲೆಯನ್ನೇ ಹೊಂದಿದ್ದು ದಖನ್ ಪ್ರಾಂತದ ರಕ್ಷಣೆಯ ಜೊತೆಗೆ, ರಾಜ್ಯದ ಸಮಗ್ರ ಅಭಿವೃದ್ಧಿಗೂ ಅಗಣ್ಯ ಕೊಡುಗೆಯನ್ನು ನೀಡಿದೆ.

ಕ್ರಿ.ಶ ೫೨೯–೫೭೯ರ ಅವಧಿಯಲ್ಲಿ ರಾಜ್ಯವನ್ನಾಳಿದ ದುರ್ವಿನಿತ ಈ ಮನೆತನದ ಹೆಸರಾಂತ ಅರಸುಗಳಲ್ಲೊಬ್ಬನಾಗಿದ್ದು ಕಡುಗಲಿಯು, ಪಂಡಿತೋತ್ತಮನು ಆಗಿದ್ದನು. 'ಶಬ್ದಾವತಾರ' ಗ್ರಂಥಕರ್ತೃ ಎಂದು ಪರಿಗಣಿಸಲಾಗಿದ್ದು, ಗುಣಾಢ್ಯನ 'ವಡ್ಡಕಥಾ' ಗ್ರಂಥವನ್ನು ಸಂಸ್ಕೃತಕ್ಕೆ ಭಾಷಾಂತರಿಸದನೆಂದು ಹೇಳಲಾಗುತ್ತಿದ್ದು, ಇದನ್ನು ಅನೇಕ ಸಮಕಾಲೀನ ಶಾಸನಗಳೂ ದಾಖಲಿಸಿವೆ. ಅಲ್ಲದೆ, ಇವನನ್ನು ಖ್ಯಾತ ಕವಿಯೆಂದು, ನಂತರದಲ್ಲಿ ರಚಿಸಲ್ಪಟ್ಟಿರುವ 'ಕವಿರಾಜ ಮಾರ್ಗ' ಗ್ರಂಥವೂ ಉಲ್ಲೇಖಿಸಿದೆ. ಪದಪ್ರಯೋಗ ಹಾಗೂ ಕೃತಿ ನಿರೂಪಣಾ ಶೈಲಿಗಳಿಗಾಗಿ ದುರ್ವಿನಿತನನ್ನು ಹೊಗಳಲಾಗುತ್ತದೆ. ಶೌರ್ಯ, ರಾಜತಂತ್ರಜ್ಞತೆ ಹಾಗೂ ಪಾಂಡಿತ್ಯಗಳ ಅಪೂರ್ವ ತ್ರಿವೇಣಿ ಸಂಗಮದಂತಿದ್ದ ದುರ್ವಿನಿತನು ಗಂಗರಸರಲ್ಲೇ ಅತ್ಯಂತ ಶ್ರೇಷ್ಠ ದೊರೆಯಾಗಿದ್ದನು. ಈತನ ಮಗನಾದ ಮುಷ್ಕರನ ಆಳ್ವಿಕೆಯಲ್ಲಿ ಗಂಗ ಸಾಮ್ರಾಜ್ಯವು ಬಳ್ಳಾರಿ ಹಾಗೂ ಧಾರವಾಡ ಭಾಗಗಳಿಗೂ ವ್ಯಾಪಿಸಿತು.

ಕ್ರಿ.ಶ ೬೭೯ರಿಂದ ಆಡಳಿತ ನಡೆಸಿದ ಒಂದನೆಯ ಶಿವಮಾರ ಈ ಮನೆತನದ ಇನ್ನೊಬ್ಬ ಪ್ರಮುಖ ದೊರೆ. ಪಲ್ಲವರ ಧಾಳಿಗಳನ್ನು ಸಮರ್ಥವಾಗಿ ಎದುರಿಸಿದ ಇವನು ಗಂಗ ರಾಜ್ಯವನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದ. ಆನಂತರ ಇವನ ಮೊಮ್ಮಗನಾದ ಶ್ರೀಪುರುಷ ಗದ್ದುಗೆಯನ್ನೇರಿದನು.

ಗಂಗರಸರಲ್ಲೇ ಹೆಚ್ಚು ಪ್ರಖ್ಯಾತ ಅರಸನಾಗಿದ್ದ ಶ್ರೀಪುರಷನು ರಾಜಕೀಯ ಏಳು–ಬೀಳುಗಳಿಂದ ಕೂಡಿದ ಬಿರುಸಿನ ಚಟುವಟಿಕೆಯ ಜೊತೆಗೆ ಹಲವಾರು ಯುದ್ಧಗಳನ್ನು ನಿಭಾಯಿಸಬೇಕಾಯಿತು. ಕ್ರಿ.ಶ ೭೫೬ರಲ್ಲಿ ಜರುಗಿದ ಕುವಲಾಲಪುರದ ಕದನದಲ್ಲಿ ಇವನು ಬಹಳಷ್ಟು ಪ್ರದೇಶವನ್ನು ತಾತ್ಕಾಲಿಕವಾಗಿ ಕಳೆದುಕೊಂಡನಾದರೂ ಬಾದಾಮಿ ಚಾಲುಕ್ಯರ ನೆರವಿನೊಂದಿಗೆ ಅವನ್ನು ಮರುಪಡೆಯಲು ಸಾಧ್ಯವಾಯಿತು. ಇವನು ಪಾಂಡ್ಯ ಹಾಗೂ ರಾಷ್ಟ್ರಕೂಟರೊಂದಿಗೂ ಸೆಣಸಬೇಕಾಯಿತು.

ಇವನು ಸ್ವೀಕರಿಸಿದ ಪೆರ್ಮಾನಡಿ ಎಂಬ ಬಿರುದನ್ನು ಆನಂತರ ಬಂದ ಎಲ್ಲಾ ಗಂಗರಸರೂ ಧರಿಸಿದ್ದು ಉಲ್ಲೇಖಾರ್ಹ. ಕ್ರಿ.ಶ ೭೬೮ರಲ್ಲಿ ಜರುಗಿದ ಯುದ್ಧದಿಂದಾಗಿ ಗಂಗವಾಡಿ ಪ್ರಾಂತದ ಕೆಲವು ಭಾಗಗಳು ರಾಷ್ಟ್ರಕೂಟರ ನಿಯಂತ್ರಣಕೊಳಪಟ್ಟವು. ಕ್ರಿ.ಶ ೭೨೬–೭೮೮ರವರೆಗಿನ ಶ್ರೀಪುರುಷನ ಆಡಳಿತಾವಧಿಯಲ್ಲಿ ರಾಷ್ಟ್ರಕೂಟ ಹಾಗೂ ನೊಳಂಬರೊಂದಿಗಿನ ನಿರಂತರ ಯುದ್ಧಗಳಿಂದಾಗಿ ಆಡಳಿತವು ಕುಂಠಿತಗೊಂಡರೂ, ಗಂಗ ರಾಜ್ಯದ ಗಡಿಯನ್ನು ಯಶಸ್ವಿಯಾಗಿ ಕಾಯ್ದುಕೊಳ್ಳುವ ಮೂಲಕ, ರಾಜಕೇಸರಿ, ಭೀಮಕೋಪ, ಕೊಂಗುಣಿ, ರಾಜಾಧಿರಾಜ, ಪರಮೇಶ್ವರ ಮುಂತಾದ ಬಿರುದುಗಳನ್ನು ಇವನು ಧರಿಸಿರುವುದು ಗಮನಾರ್ಹವಾಗಿದೆ.

ಶ್ರೀಪುರುಷನೂ ಪಂಡಿತನಿದ್ದು ಜೊತೆಗೆ ವಿದ್ಯಾ ಪೋಷಕನೂ ಆಗಿದ್ದನು. ಗಜಗಳನ್ನು ಸಾಕಿ, ತರಬೇತಿ ನೀಡುವ ಕಲೆಗೆ ಸಂಬಂಧಿಸಿದ 'ಗಜಶಾಸ್ತ್ರ' ಗ್ರಂಥದ ಕರ್ತೃ ಇವನೆಂದು ಅಭಿಪ್ರಾಯವಿದೆ. ಈತನ ಆಳ್ವಿಕೆಯು ಸುಭಿಕ್ಷತೆಯಿಂದ ಕೂಡಿದ್ದರಿಂದ, 'ಶ್ರೀರಾಜ್ಯ' ಎಂದು ಶಾಸನಗಳಲ್ಲಿ ವರ್ಣಿಸಲಾಗಿದೆ. ಇವನ ಮರಣಾನಂತರ (೭೮೮) ಅವನ ನಾಲ್ವರು ಪುತ್ರರ ನಡುವೆ ಸಿಂಹಾಸನಕ್ಕಾಗಿ ಅಂತಃಕಲಹ ನಡೆದು ಅಂತಿಮವಾಗಿ ಅಧಿಕಾರ ಪಡೆಯುವಲ್ಲಿ ಇಮ್ಮಡಿ ಶಿವಮಾರನು ಯಶಸ್ವಿಯಾದನು.

ಶ್ರೀಪುರುಷನಿರುವವರೆಗೂ ಮೇಲುಗೈ ಸಾಧಿಸುವಲ್ಲಿ ವಿಫಲರಾಗಿದ್ದ ರಾಷ್ಟ್ರಕೂಟರು, ಇಮ್ಮಡಿ ಶಿವಮಾರನನ್ನು ಸೋಲಿಸಿ ಸೆರೆಯಲ್ಲಿ ಇಟ್ಟರು. ಧ್ರುವನ ಕಿರಿಯ ಸೋದರನಾದ ಇಮ್ಮಡಿ ಗೋವಿಂದನು, ತನ್ನ ಮಗ ಸ್ತಂಭನನ್ನು ಗಂಗವಾಡಿಗೆ ಪ್ರಾಂತಾಧಿಕಾರಿಯಾಗಿ ನೇಮಿಸಿದನು. ಆನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಗೋವಿಂದನು, ಇಮ್ಮಡಿ ಶಿವಮಾರನನ್ನು ಸೆರೆಯಿಂದ ಮುಕ್ತಗೊಳಿಸಿದನಾದರೂ, ಅವಿಧೇಯತೆಯಿಂದಾಗಿ ಇಮ್ಮಡಿ ಶಿವಮಾರನು ಸೆರೆಯಾಗಿ ಅವನ ಮಗ ಒಂದನೆಯ ಮಾರಸಿಂಹನನ್ನು ಗಂಗರಾಜ್ಯಕ್ಕೆ ರಾಜನನ್ನಾಗಿ ೭೯೬ರಲ್ಲಿ ಕೂರಿಸಲಾಯಿತು. ಇಮ್ಮಡಿ ಶಿವಮಾರನು ತನ್ನ ಅಧಿಕಾರದ ಹೆಚ್ಚಿನ ಭಾಗವನ್ನು ಸೆರೆವಾಸದಲ್ಲಿ ಧಾರ್ಮಿಕ, ಸಾಹಿತ್ಯ ಚಟುವಟಿಕೆಗಳಲ್ಲಿ ಕಳೆಯುವುದರ ಜೊತೆಗೆ 'ಗಜಾಷ್ಟಕ' ಹಾಗೂ 'ಸೇತುಬಂಧ' ಎಂಬ ಗ್ರಂಥಗಳನ್ನು ರಚಿಸಿದ್ದು, ಧಾರ್ಮಿಕ ಸಂಸ್ಥೆಗಳಿಗೆ ದಾನ ದತ್ತಿಗಳನ್ನು ನೀಡಿದನು.

ಆನಂತರದಲ್ಲಿ ಒಂದನೆಯ ರಾಚಮಲ್ಲ ಹಾಗೂ ನೀತಿಮಾರ್ಗರಂತಹ ಗಂಗರಸರು ರಾಷ್ಟ್ರಕೂಟರ ನಿಯಂತ್ರಣದಿಂದ ಮುಕ್ತರಾಗಲು ಯತ್ನಿಸಿದರು. ಮುಂದೆ, ರಾಷ್ಟ್ರಕೂಟ ಅಮೋಘವರ್ಷನ ಮಗಳನ್ನು ಗಂಗ ರಾಚಮಲ್ಲನ ಮಗನಿಗೆ ವಿವಾಹ ಮಾಡಿಕೊಡುವ ವೈವಾಹಿಕ ಸಂಬಂಧದ ಮೂಲಕ ರಾಷ್ಟ್ರಕೂಟ–ಗಂಗ ವೈಷಮ್ಯ ಶಮನವಾಯಿತು. ಗಂಗ ನೀತಿಮಾರ್ಗನು, ಗಂಗರಾಜ್ಯದ ಸಾರ್ವಭೌಮತ್ವವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದನು. ಬಾಣರು ಗಂಗರಾಜ್ಯದ ಮೇಲೆ ಧಾಳಿ ಮಾಡಿದಾಗ ನೊಳಂಬ ಮಹೇಂದ್ರನ ನೆರವಿನೊಂದಿಗೆ ಬಾಣರನ್ನು ಹಿಮ್ಮೆಟ್ಟಿಸುವಲ್ಲಿ ಗಂಗರು ಯಶಸ್ವಿಯಾದರು. ಆದರೆ ಕ್ರಿ.ಶ ೮೯೫ರಲ್ಲಿ ಗಂಗ ಒಂದನೆಯ ಬೂತುಗನ ಮಗ ಎರೆಗಂಗನು, ನೊಳಂಬ ಮಹೇಂದ್ರನನ್ನು ಸಂಹರಿಸಿ ನೊಳಂಬ ಮಹೇಂದ್ರಾಂತಕ ಎಂಬ ಬಿರುದನ್ನು ಧರಿಸಿದನು. ಇದರೊಂದಿಗೆ ನೊಳಂಬ ರಾಜ್ಯವು ಗಂಗರಾಜ್ಯದ ನಿಯಂತ್ರಣಕ್ಕೊಳಪಟ್ಟು, ನೊಳಂಬರು ಗಂಗರ ವಿಧೇಯ ಸಾಮಂತರಾದರು. ವ್ಯಾಕರಣ, ಸಾಹಿತ್ಯ, ಹಾಗೂ ಸಂಗೀತ ಶಾಸ್ತ್ರಗಳಲ್ಲಿ ನಿಷ್ಣಾತನಿದ್ದ ಎರೆಗಂಗನು ಕ್ರಿ.ಶ ೯೨೦ರಲ್ಲಿ ಗತಿಸಿದನು. ಆನಂತರದಲ್ಲಿ ಗಂಗರಾಜಕುಮಾರರ ನಡುವೆ ಅಂತಃಕಲಹ ಏರ್ಪಟ್ಟು ಗಂಗ ಸಾಮ್ರಾಜ್ಯದ ಪ್ರಾಬಲ್ಯ ಕ್ಷೀಣಿಸಲಾರಂಭಿಸಿತು.

ಗಂಗರ ಮತ್ತೊಬ್ಬ ಪ್ರಮುಖ ಅರಸನಾದ ಇಮ್ಮಡಿ ಬೂತುಗನು ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ಸಾಮಂತನಾಗಿ, ಚೋಳರ ವಿರುದ್ಧದ ಹೋರಾಟದಲ್ಲಿ ಚಕ್ರವರ್ತಿಗೆ ನೆರವಾದನು. ಕ್ರಿ.ಶ ೯೪೯ರಲ್ಲಿ ಜರುಗಿದ ತಕ್ಕೋಲಂ ಯುದ್ಧದಲ್ಲಿ, ಚೋಳ ರಾಜಾಧಿತ್ಯನನ್ನು




***ರಾಮೇಶ್ವರ ದೇವಾಲಯ, ನರಸಮಂಗಲ, ಚಾಮರಾಜನಗರ ಜಿಲ್ಲೆ***

ಪಂಚಕೂಟ ಬಸದಿ, ಕಂಬದಹಳ್ಳಿ, ಮಂಡ್ಯ ಜಿಲ್ಲೆ



ಸಂಹರಿಸಿದನು. ಇದಕ್ಕಾಗಿ ಇಮ್ಮಡಿ ಬೂತುಗನಿಗೆ ಬನವಾಸಿ, ಪುಲಿಗೆರೆ, ಬೆಳ್ವೊಲ ಗಳನ್ನು ಉಂಬಳಿಯಾಗಿ ನೀಡಿ ಗೌರವಿಸಲಾಯಿತು. ಇವನು ಶೂರನಿದ್ದು, ಸಾಹಿತ್ಯ, ಕಲೆ ಹಾಗೂ ವಾಸ್ತುಶಿಲ್ಪಗಳಿಗೆ ಆಶ್ರಯದಾತನಿದ್ದು, ಧಾರ್ಮಿಕ ಸಂಸ್ಥೆಗಳಿಗೆ ಹಲವಾರು ದತ್ತಿಗಳನ್ನು ನೀಡಿದ್ದನು.

ಕ್ರಿ.ಶ.೯೬೩–೯೭೪ರವರೆಗೆ ಆಳಿದ ಇಮ್ಮಡಿ ಮಾರಸಿಂಹನು ಗಂಗರ ಕೊನೆಯ ಬಲಿಷ್ಠ ಅರಸನಿದ್ದು, ಈ ವೇಳೆಗಾಗಲೇ ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ತೈಲನು–ರಾಷ್ಟ್ರಕೂಟರ ಪರಮಾಧಿಕಾರವನ್ನು ದಖನ್ನಿನಲ್ಲಿ ಕಿತ್ತೊಗೆಯುವಲ್ಲಿ ಯಶಸ್ವಿಯಾಗಿದ್ದನು. ನೊಳಂಬರೊಂದಿಗೆ ಯಶಸ್ವಿಯಾಗಿ ಹೋರಾಡಿದ ಇಮ್ಮಡಿ ಮಾರಸಿಂಹನು 'ನೊಳಂಬಾಂತಕ' ಎಂಬ ಬಿರುದನ್ನು ಧರಿಸಿದ್ದನು. ಶ್ರವಣಬೆಳಗೊಳದ ಭವ್ಯ ಗೊಮ್ಮಟ (ಬಾಹುಬಲಿ)ದ ಸಂಸ್ಥಾಪಕನಾದ ಚಾವುಂಡರಾಯನು ಇಮ್ಮಡಿ ಮಾರಸಿಂಹನ ಮಂತ್ರಿಯಾಗಿದ್ದು, ಈ ಕಾರ್ಯದಿಂದಾಗಿ ಭಾರತದ ಇತಿಹಾಸದಲ್ಲಿ ಗಂಗರ ಹೆಸರು ಚಿರಸ್ಥಾಯಿಯಾಗಿದೆ. ಶಿಲ್ಪಕಲಾರಂಗದಲ್ಲಿ ಗಂಗರ ಕಾಲದ ಶಿಲ್ಪಿಗಳು ಸಾಧಿಸಿದ್ದ ಪರಿಣತಿಯನ್ನು ಈ ಕಲಾಕುಸುಮವು ಬಿಂಬಿಸುತ್ತದೆ.



ಕಟ್ಟಾ ಜೈನಾನುಯಾಯಿಯಾಗಿದ್ದ ಇಮ್ಮಡಿ ಮಾರಸಿಂಹನು ಜೈನ ಯತಿಗಳಿಗೆ ಉದಾರ ಪೋಷಣೆ ನೀಡಿದ್ದು, ತನ್ನ ಕೊನೆಯ ದಿನಗಳಲ್ಲಿ ಶ್ರವಣಬೆಳಗೊಳದಲ್ಲೇ ವ್ಯಯಿಸಿದ್ದ ಇವನು ಜೈನ ಸಂಪ್ರದಾಯದಂತೆ ಸಲ್ಲೇಖನ ವ್ರತ ಕೈಗೊಂಡು ನಿರ್ವಾಣ ಹೊಂದಿದನು. ಆದರೆ ಮಾರಸಿಂಹನ ನಂತರ ಅವನ ಮಕ್ಕಳ ನಡುವೆ ಉದ್ಭವಿಸಿದ ಅಂತಃಕಲಹದ ಲಾಭವನ್ನು ಪಡೆದ ಕಲ್ಯಾಣ ಚಾಳುಕ್ಯರು, ಗಂಗವಾಡಿಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರು. ಆದರೂ ಕ್ರಿ.ಶ ೯೯೯ರವರೆಗೆ ಮಾರಸಿಂಹನ ಮಗನಾದ ನಾಲ್ಕನೆಯ ರಾಚಮಲ್ಲನು ಕರ್ನಾಟಕದ ಸ್ವಲ್ಪ ಭಾಗವನ್ನಾಳಿದನು. ಆದರೆ ಕ್ರಿ.ಶ ೯೯೯ರಲ್ಲಿ ಚೋಳ ಒಂದನೆಯ ರಾಜರಾಜನು ಗಂಗ ರಾಜ್ಯವನ್ನು ವಶಪಡಿಸಿಕೊಂಡು, ರಾಜಧಾನಿ ತಲಕಾಡನ್ನು ಸ್ವಾಧೀನಪಡಿಸಿಕೊಂಡನು. ಇದರೊಂದಿಗೆ ಗಂಗರ ಆಡಳಿತವೂ ಕ್ರಿ.ಶ.೧೦ನೇ ಶತಮಾನದ ಅಂತ್ಯಕ್ಕೆ ಮುಕ್ತಾಯಗೊಂಡಿತು.

ಆದರೂ ಧರ್ಮಾನುಸಾರ ಕಟಿಬದ್ಧ ಆಡಳಿತವನ್ನು ನೀಡುವುದರ ಜೊತೆಗೆ, ಧರ್ಮ, ಸಾಹಿತ್ಯ, ಕಲೆ, ವಾಸ್ತುಶಿಲ್ಪ ಕ್ಷೇತ್ರಗಳಿಗೆ ರಾಜಾಶ್ರಯ ನೀಡುವ ಮೂಲಕ ಗಂಗರು ಕರ್ನಾಟಕದ ಇತಿಹಾಸದಲ್ಲಿ ಉತ್ಕೃಷ್ಟ ಸ್ಥಾನವನ್ನು ರೂಪಿಸಿಕೊಂಡಿದ್ದಾರೆ.